ಕರ್ನಾಟಕ ವಿಧಾನಸಭೆ
ಸೋಮವಾರ 3ನೇ ಮಾರ್ಚ್ 2003ರಂದು
ಸದನವು ವಿಧಾನಸಭೆಯ ಸಭಾಂಗಣದಲ್ಲಿ
ಬೆಳಿಗ್ಗೆ 11-00 ಗಂಟೆಗೆ ಸಮಾವೇಶಗೊಂಡಿತು.
ಅಧ್ಯಕ್ಷರಾದ ಶ್ರೀ (ಎಂ.ವಿ. ವೆಂಕಟಪ್ಪ) ಅವರು,
ಪೀಠದಲ್ಲಿ ಉಪಸ್ಥಿತರಿದ್ದರು

ಅಧ್ಯಕ್ಷರು :- ಇಂದಿನ ಕಾರ್ಯಕ್ರಮದ ಪಟ್ಟಿಯ ಪ್ರಕಾರ ಮೊದಲನೆಯದಾಗಿ ಸಂತಾಪ ಸೂಚನೆಗಳು

1) ಸಂತಾಪ ಸೂಚನೆಗಳು

ಅಧ್ಯಕ್ಷರು:- ಲೋಕಸಭೆಯ ಮಾಜಿ ಸದಸ್ಯರಾದ ಶ್ರೀ ಬಿ.ಎಂ. ಮೆಣಸಿನಕಾಯಿ, ವಿಧಾನ ಸಭೆಯ ಮಾಜಿ ಸದಸ್ಯರುಗಳಾದ ಶ್ರೀ ಲೋಕಯ್ಯ ಶೆಟ್ಟಿ, ಶ್ರೀ ಎಸ್. ಅಂಜಯ್ಯ, ಶ್ರೀ ಎ.ಎಂ. ಸೂರ್ಯನಾರಾಯಣ ಗೌಡ, ಮೈಸೂರು ಪ್ರಜಾ ಪ್ರತಿನಿಧಿ ಸಭಾ ಸದಸ್ಯರಾದ ಶ್ರೀ ಕೆ.ಆರ್. ಶ್ರೀನಿವಾಸನ್ ಹಾಗೂ ಗಣ್ಯ ವ್ಯಕ್ತಿಗಳಾದ ಬಾಹ್ಯಾಕಾಶ ಯಾನಿ ಶ್ರೀಮತಿ ಕಲ್ಪನಾ ಚಾವ್ಲಾ ಹಾಗೂ ಚಿತ್ರರಂಗದ ಖ್ಯಾತ ಹಿರಿಯ ನಟಿಯಾದ ಶ್ರೀಮತಿ ಪಂಡರಿಬಾಯಿ ಮತ್ತು ವಿಧಾನ ಮಂಡಲದ ಮಾಜಿ ಕಾರ್ಯದರ್ಶಿಗಳಾಗಿದ್ದ ಶ್ರೀ ತೆ. ಹನುಮಂತಪ್ಪ ಇವರುಗಳು ನಿಧನರಾಗಿರುವುದನ್ನು ಈ ಸದನಕ್ಕೆ ಅತ್ಯಂತ ವಿಷಾದದಿಂದ ತಿಳಿಸಬಯಸುತ್ತೇನೆ.

1. ಶ್ರೀ ಬಿ.ಎಂ. ಮೆಣಸಿನಕಾಯಿ

ಲೋಕಸಭೆಯ ಮಾಜಿ ಸದಸ್ಯರಾದ ಶ್ರೀ ಬಿ.ಎಂ. ಮೆಣಸಿನಕಾಯಿ, ಅವರು 1926ನೇ ಇಸವಿ ಫೆಬ್ರವರಿ, 3 ರಂದು ಹಾವೇರಿ ತಾಲ್ಲೂಕಿನ ಹಕ್ಕೂರು ಗ್ರಾಮದಲ್ಲಿ ಜನಿಸಿದ್ದರು. ಶ್ರೀಯುತರು ವೃತ್ತಿಯಲ್ಲಿ ಕೃಷಿಕರಾಗಿದ್ದರು. ಬಿ.ಕಾಂ ಪದವೀಧರರಾದ ಶ್ರೀಯುತರು 1979 ರಿಂದ ಆರು ವರ್ಷಗಳ ಕಾಲ ಹಾವೇರಿ ಪುರಸಭೆಯ ಅಧ್ಯಕ್ಷರಾಗಿ, ಹಾವೇರಿ ರೋಟರಿ ಕ್ಲಬ್‌ನ ಅಧ್ಯಕ್ಷರಾಗಿ, 1985 ರಿಂದ ಕರ್ನಾಟಕ ರಾಜ್ಯ ಪಟ್ಟಣ / ಮುನ್ಸಿಪಲ್ ಫೆಡರೇಶನ್‌ನ ಸ್ಥಾಪಕರಾಗಿ ಮತ್ತು ಅಧ್ಯಕ್ಷರಾಗಿ, ಕೆ.ಎಲ್.ಇ. ಸಂಸ್ಥೆಯ ಗುದ್ದಲಪ್ಪ ಹಳ್ಳೀಕೇರಿ ವಿಶ್ವವಿದ್ಯಾನಿಲಯದ ಸದಸ್ಯರಾಗಿ ಮತ್ತು ಕೇಂದ್ರ ವಾಣಿಜ್ಯ ಸಚಿವಾಲಯದ ಕೃಷಿ ಉತ್ಪನ್ನ ರಫ್ತು ಅಭಿವೃದ್ಧಿ ಪ್ರಾಧಿಕಾರದ ಸದಸ್ಯರಾಗಿಯೂ ಸೇವೆ ಸಲ್ಲಿಸಿದ್ದರು. 1988 ರಿಂದ 1994 ರವರೆಗೆ, ಆರು ವರ್ಷಗಳ ಕಾಲ ವಿಧಾನ ಪರಿಷತ್ತಿನ ಸದಸ್ಯರಾಗಿ ಸೇವೆ ಸಲ್ಲಿಸಿದ ಶ್ರೀಯುತರು, ಧಾರವಾಡ ಲೋಕಸಭಾ ಕ್ಷೇತ್ರದಿಂದ 12 ನೇ ಲೋಕಸಭೆಗೆ ಆಯ್ಕೆಯಾಗಿ ಸೇವೆ ಸಲ್ಲಿಸಿದ್ದರು.

ಶ್ರೀಯುತರು ದಿನಾಂಕ 17-01-2003 ರಂದು ನಿಧನ ಹೊಂದಿದರು.

2. ಶ್ರೀ ಎಂ. ಲೋಕಯ್ಯ ಶೆಟ್ಟಿ

ವಿಧಾನ ಸಭೆಯ ಮಾಜಿ ಸದಸ್ಯರಾದ ಶ್ರೀ ಎಂ. ಲೋಕಯ್ಯ ಶೆಟ್ಟಿ, ಅವರು 1923ನೇ ಇಸವಿ ಜೂನ್, 23 ರಂದು ಜನಿಸಿದ್ದರು. ಸ್ವಾತಂತ್ರ್ಯ ಹೋರಾಟಗಾರರಾಗಿದ್ದ ಶ್ರೀಯುತರು ಕ್ವಿಟ್ ಇಂಡಿಯ ಚಳುವಳಿಯಲ್ಲಿಯೂ ಭಾಗವಹಿಸಿ ಹಿಂದ್ ಮಜ್ದೂರ್ ಸಭಾ (ಎಚ್.ಎಂ.ಎಸ್)

ಕಾರ್ಮಿಕ ಸಂಘಟನೆಯ ರಾಜ್ಯ ಅಧ್ಯಕ್ಷರಾಗಿ, ಸ್ಥಳೀಯ ಬಾಡಿ ಬಿಲ್ಡಿಂಗ್ ಅಸೋಸಿಯೇಶನ್‌ನಲ್ಲಿ ಕಾರ್ಯದರ್ಶಿಯಾಗಿಯೂ ಸೇವೆ ಸಲ್ಲಿಸಿದ್ದರು. ಶ್ರೀಯುತರು ಸೂರತ್‌ಕಲ್ ಕ್ಷೇತ್ರದಿಂದ 7 ನೇ ವಿಧಾನ ಸಭೆಗೆ ಆಯ್ಕೆಯಾಗಿದ್ದರು.

ಶ್ರೀಯುತರು ದಿನಾಂಕ 21-01-2003 ರಂದು ನಿಧನ ಹೊಂದಿದರು.

3. ಶ್ರೀ ಎಸ್. ಅಂಜಯ್ಯ

ವಿಧಾನ ಸಭೆಯ ಮಾಜಿ ಸದಸ್ಯರಾದ ಶ್ರೀ ಎಸ್. ಅಂಜಯ್ಯ, ಅವರು ಮಧುಗಿರಿ ತಾಲ್ಲೂಕಿನ ಬೆದತ್ತೂರು ಗ್ರಾಮದಲ್ಲಿ ಜನಿಸಿದ ಶ್ರೀಯುತರು ಸ್ವಾತಂತ್ರ ಹೋರಾಟಗಾರರಾಗಿದ್ದು ಕೊರಟಗೆರೆ ಕ್ಷೇತ್ರದಿಂದ ಮೈಸೂರು ಪ್ರಜಾಪ್ರತಿನಿಧಿ ಸಭೆಯ ಸದಸ್ಯರಾಗಿಯೂ ಸೇವೆ ಸಲ್ಲಿಸಿ, 3 ನೇ ವಿಧಾನ ಸಭೆಗೆ 1963ರ ಉಪ ಚುನಾವಣೆಯಲ್ಲಿ ಮಧುಗಿರಿ ಕ್ಷೇತ್ರದಿಂದ ಆಯ್ಕೆಯಾಗಿ ಸೇವೆ ಸಲ್ಲಿಸಿರುತ್ತಾರೆ.

ಶ್ರೀಯುತರು ದಿನಾಂಕ 18-02-2003 ರಂದು ನಿಧನ ಹೊಂದಿದರು.

4. ಶ್ರೀ ಎ.ಎಂ. ಸೂರ್ಯನಾರಾಯಣ ಗೌಡ

ವಿಧಾನ ಸಭೆಯ ಮಾಜಿ ಸದಸ್ಯರಾದ ಶ್ರೀ ಎ.ಎಂ. ಸೂರ್ಯನಾರಾಯಣ ಗೌಡ ಅವರು 12 ನೇ ನವೆಂಬರ್, 1931 ರಂದು ಜನಿಸಿದ್ದು, ಕಾನೂನು ಪದವೀಧರರಾಗಿದ್ದರು. ಶ್ರೀಯುತರು ವೃತ್ತಿಯಲ್ಲಿ ಕೃಷಿಕರಾಗಿದ್ದರು. ಎರಡು ವರ್ಷಗಳ ಕಾಲ ಶಿಕ್ಷಕರಾಗಿ ಸೇವೆ ಸಲ್ಲಿಸಿದ ಶ್ರೀಯುತರು ಸಮಾಜ ಸೇವಕರಾಗಿ ಸೇವಾದಳ ಕ್ಯಾಂಪ್‌ನಲ್ಲಿ ವಿಶ್ವವಿದ್ಯಾನಿಲಯ ಸ್ಕೌಟ್ ಕ್ಯಾಂಪ್‌ನಲ್ಲಿ, ಮತ್ತು ಎನ್‌ಸಿಸಿಯಲ್ಲಿ ಸಕ್ರಿಯವಾಗಿ ಪಾಲ್ಗೊಂಡಿದ್ದರು. 1946 ರಿಂದ 49 ರವರೆಗೆ ಕಾಂಗ್ರೆಸ್ ಸಂಘಟನೆಯಲ್ಲಿ ಸೇವೆ ಸಲ್ಲಿಸಿದ ಶ್ರೀಯುತರು ಎಐಸಿಸಿ ಸದಸ್ಯರಾಗಿ ಮತ್ತು ವಿಧಾನ ಮಂಡಲದ ಕಾಂಗ್ರೆಸ್ ಪಕ್ಷದಲ್ಲಿ ಜಂಟಿ ಸಚೇತಕರಾಗಿಯೂ ಸೇವೆ ಸಲ್ಲಿಸಿದ್ದರು. ಶ್ರೀಯುತರು 5 ನೇ ವಿಧಾನಸಭೆಗೆ ಆಯ್ಕೆಯಾಗಿ ಸೇವೆ ಸಲ್ಲಿಸಿದ್ದರು.

ಶ್ರೀಯುತರು ದಿನಾಂಕ 25-02-2003 ರಂದು ನಿಧನ ಹೊಂದಿದರು.

5. ಶ್ರೀ ಕೆ.ಆರ್. ಶ್ರೀನಿವಾಸನ್

ಮೈಸೂರು ಪ್ರಜಾಪ್ರತಿನಿಧಿ ಸಭಾ ಸದಸ್ಯರಾದ ಶ್ರೀ ಕೆ.ಆರ್. ಶ್ರೀನಿವಾಸನ್, ಅವರು ವೃತ್ತಿಯಲ್ಲಿ ವಕೀಲರು ಹಾಗೂ ಪತ್ರಕರ್ತರಾಗಿದ್ದರು. ಸ್ವಾತಂತ್ರ್ಯ ಯೋಧರಾದ ಶ್ರೀಯುತರು 1941 ರಿಂದ 1945 ರವರೆಗೆ ಮೈಸೂರು ಪ್ರಜಾಪ್ರತಿನಿಧಿ ಸಭಾ ಸದಸ್ಯರಾಗಿ ಸೇವೆ ಸಲ್ಲಿಸಿದ್ದರು.

ಶ್ರೀಯುತರು ದಿನಾಂಕ 26-01-2003 ರಂದು ನಿಧನ ಹೊಂದಿದರು.

6. ಶ್ರೀಮತಿ ಕಲ್ಪನಾ ಚಾವ್ಲಾ

ಭಾರತ ಸಂಜಾತೆ ವಿಜ್ಞಾನಿ ಹಾಗೂ ಬಾಹ್ಯಾಕಾಶ ಯಾನಿ ಶ್ರೀಮತಿ ಕಲ್ಪನಾ ಚಾವ್ಲಾ, ಅವರು ದಿನಾಂಕ 1 ನೇ ಜುಲೈ, 1961 ರಂದು ಪಂಜಾಬ್ ರಾಜ್ಯದ ಕರ್ನಾಲ್ ಎಂಬ ಊರಿನಲ್ಲಿ ಜನಿಸಿದ್ದರು. ಪಂಜಾಬ್ ಎಂಜಿನಿಯರಿಂಗ್ ಕಾಲೇಜಿನಿಂದ ಏರೋನಾಟಿಕಲ್ ಎಂಜಿನಿಯರಿಂಗ್ ಪದವಿ ಪಡೆದು 1988 ರಲ್ಲಿ ಏರೋಸ್ಪೇಸ್ ಎಂಜಿನಿಯರಿಂಗ್‌ನಲ್ಲಿ ಡಾಕ್ಟರೇಟ್ ಪಡೆದಿದ್ದರು. ನಂತರ, ಅಮೇರಿಕಾದಲ್ಲಿ ನಾಸಾದ ಅಮೇನ್ ಸಂಶೋಧನಾ ಕೇಂದ್ರದಲ್ಲಿ ಸಂಶೋಧನೆ ಆರಂಭಿಸಿದ ಇವರು ಕ್ಯಾಲಿಫೋರ್ನಿಯಾದ ಓವರ್‌ಸೆಟ್ ಮೆಥಡ್ಸ್ ಇಂಕ್ ಸಂಸ್ಥೆಯ ಉಪಾಧ್ಯಕ್ಷೆಯಾಗಿ, ಆ ನಂತರ 1994 ರಲ್ಲಿ ಗಗನಯಾತ್ರೆಗೆ ಆಯ್ಕೆಯಾಗಿ, ಹೂಸ್ಟನ್‌ನ

ಜಾನ್ಸನ್ ಸ್ಪೇಸ್ ಸೆಂಟರ್‌ನಲ್ಲಿ ಒಂದು ವರ್ಷ ಕಾಲ ಬಾಹ್ಯಾಕಾಶ ಯಾನಕ್ಕೆ ತರಬೇತಿ ಪಡೆದು, 1997 ರಲ್ಲಿ ಪ್ರಥಮ ಬಾರಿಗೆ ಬಾಹ್ಯಾಕಾಶ ಯಾನದಲ್ಲಿ ಸ್ಪೇಸ್‌ವಾಕ್ ನಡೆಸಿದ ಅಸಾಧಾರಣ ಬುದ್ದಿವಂತಿಕೆಯ ವಿಜ್ಞಾನಿ. 2003 ರಲ್ಲಿ ಎರಡನೇ ಭಾರಿ ಬಾಹ್ಯಾಕಾಶ ಯಾನಕ್ಕೆ ಹೋಗಿ ಹಿಂತಿರುಗುವಾಗ ಕೊಲಂಬಿಯಾ ಅಂತರಿಕ್ಷ ನೌಕೆ ದುರಂತದಲ್ಲಿ ದಿನಾಂಕ 01-02-2003 ರಂದು ದುರ್ಮರಣ ಹೊಂದಿದರು.

7. ಶ್ರೀಮತಿ ಪಂಡರಿಬಾಯಿ

ಉತ್ತರ ಕನ್ನಡ ಜಿಲ್ಲೆಯ ಭಟ್ಕಳದಲ್ಲಿ ಸಂಪ್ರದಾಯಸ್ಥ ಕುಟುಂಬದಲ್ಲಿ ಜನಿಸಿದರು. ಶ್ರೀಮತಿ ಪಂಡರಿಬಾಯಿಯವರು ಹರಿಕೀರ್ತನ ವಿದುಷಿಯಾಗಿ, ರಂಗಭೂಮಿ ಹಾಗೂ ಚಲನಚಿತ್ರ ನಟಿಯಾಗಿ, ನಿರ್ಮಾಪಕಿಯಾಗಿ ಆರು ದಶಕಗಳ ಕಾಲ ಅನನ್ಯ ರೀತಿಯಲ್ಲಿ ಸೇವೆ ಸಲ್ಲಿಸಿದ್ದ ವಿಶಿಷ್ಟ ವ್ಯಕ್ತಿತ್ವ. ಶ್ರೀಮತಿ ಪಂಡರಿಬಾಯಿಯವರು 1943 ರಲ್ಲಿ ಚಿತ್ರರಂಗ ಪ್ರವೇಶಿಸಿ, ದಕ್ಷಿಣ ಭಾರತದ ವಿವಿಧ ಭಾಷೆಗಳ ಸುಮಾರು 1200 ಕ್ಕೂ ಹೆಚ್ಚಿನ ಚಲನಚಿತ್ರಗಳಲ್ಲಿ ಅಭಿನಯಿಸಿದ ಹಿರಿಯಕಲಾವಿದೆ, ವಿಶಿಷ್ಟ ಅಭಿನಯಗಳ ಮೂಲಕ ಜನಸಾಮಾನ್ಯರ ಮನದಲ್ಲಿ ಛಾಪು ಮೂಡಿಸಿದ್ದರು. ಶ್ರೀಮತಿ ಪಂಡರಿಬಾಯಿಯವರಿಗೆ ಬೆಳ್ಳಿಮೋಡ ಮತ್ತು ನಮ್ಮ ಮಕ್ಕಳು ಚಿತ್ರಗಳ ಅಭಿನಯಕ್ಕಾಗಿ ಶ್ರೇಷ್ಠ ಪೋಷಕ ನಟಿ ಪ್ರಶಸ್ತಿ, ತಮಿಳುನಾಡು ಸರ್ಕಾರ ಕಲೈಮಾಮಣಿ ಪ್ರಶಸ್ತಿ ಹಾಗೂ 1995 ರಲ್ಲಿ ರಾಜ್ಯ ಸರ್ಕಾರ ರಾಜ್‌ಕುಮಾರ್ ಪ್ರಶಸ್ತಿಯನ್ನು ನೀಡಿ ಗೌರವಿಸಿದೆ.

ಶ್ರೀಮತಿ ಪಂಡರಿಬಾಯಿಯವರು ದಿನಾಂಕ 29-01-2003 ರಂದು ನಿಧನ ಹೊಂದಿದರು.

8. ಶ್ರೀ ತೆ. ಹನುಮಂತಪ್ಪ

ಶ್ರೀ ತೆ. ಹನುಮಂತಪ್ಪ ಅವರು 1915 ನೇ ಇಸವಿ ಜನವರಿ, 5 ರಂದು ಬಳ್ಳಾರಿ ಜಿಲ್ಲೆಯ ಹಂಪನಹಳ್ಳಿ ತಾಲ್ಲೂಕಿನ ತೆಲಗಿಯಲ್ಲಿ ಜನಿಸಿದ್ದು, ಕಾನೂನು ಪದವೀಧರರಾಗಿದ್ದರು. 1941 ರಲ್ಲಿ ಬಳ್ಳಾರಿಯಲ್ಲಿ ವಕೀಲರಾಗಿ ಹಾಗೂ 1942 ರಲ್ಲಿ ಸೈನ್ಯದಲ್ಲಿ ಸೆಕೆಂಡ್ ಲೆಫ್ಟಿನೆಂಟ್ ಆಗಿ ಸೇವೆ ಸಲ್ಲಿಸಿ, 1946 ರಲ್ಲಿ ಮದ್ರಾಸ್ ವಿಧಾನಮಂಡಲದಲ್ಲಿ ಸಹಾಯಕ ಕಾರ್ಯದರ್ಶಿಯಾಗಿ, 1953 ರಲ್ಲಿ ಉಪ ಕಾರ್ಯದರ್ಶಿಯಾಗಿ, 1954 ರಲ್ಲಿ ಜಂಟಿ ಕಾರ್ಯದರ್ಶಿಯಾಗಿ, 1955 ರಲ್ಲಿ ಕಾರ್ಯದರ್ಶಿಯಾಗಿದ್ದರು.

ತದನಂತರ, 19-09-1965 ರಲ್ಲಿ ಮೈಸೂರು ವಿಧಾನ ಮಂಡಲದ ಕಾರ್ಯದರ್ಶಿಯಾಗಿ 1976 ರವರೆಗೆ ಕಾರ್ಯನಿರ್ವಹಿಸಿ, 31-05-1976 ರಂದು ನಿವೃತ್ತರಾಗಿದ್ದಾರೆ. 1981 ರಲ್ಲಿ ಮುಖ್ಯಮಂತ್ರಿ ಶ್ರೀ ಆರ್. ಗುಂಡುರಾವ್ ಅವರ ರಾಜಕೀಯ ಕಾರ್ಯದರ್ಶಿಯಾಗಿ ಕೆಲಸ ನಿರ್ವಹಿಸಿದ್ದರು. ವಿಧಾನ ಮಂಡಲದ ಕಾರ್ಯದರ್ಶಿಯಾಗಿ ತಮ್ಮ ಸುದೀರ್ಘ ಸೇವೆಯಲ್ಲಿ ಅನೇಕ ಸುಧಾರಣೆಗಳನ್ನು ತಂದಿರುತ್ತಾರೆ.

ಶ್ರೀಯುತರು ದಿನಾಂಕ 16-02-2003 ರಂದು ನಿಧನ ಹೊಂದಿದರು.

† ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಗಳು) :- ಮಾನ್ಯ ಅಧ್ಯಕ್ಷರೆ, ಈ ರಾಜ್ಯದ ಸರ್ವತೋಮುಖವಾದ ಸೇವೆಯನ್ನು ಮಾಡಿದಂಥ ಹಲವಾರು ಮಹನುಭಾವರಿಗೆ ವಿಧಾನ ಸಭೆಯ ಈ ಅಧಿವೇಶನದಲ್ಲಿ ನಮ್ಮ ಗೌರವಗಳನ್ನು ಸಮರ್ಪಣೆ ಮಾಡತಕ್ಕಂಥ ಸೂಚನೆಯನ್ನು ತಾವು ಮಂಡಿಸಿದ್ದೀರಿ. ವ್ಯಕ್ತಿಗತವಾದ ಪರಿಚಯವನ್ನು ಹಲವಾರು ಗಣ್ಯರ ಜೊತೆಯಲ್ಲಿ ನಾನು ಪಡೆದಿದ್ದೆ. ಲೋಕಸಭೆಯ ಮಾಜಿ ಸದಸ್ಯರಾಗಿದ್ದ ಮಾನ್ಯ ಮೆಣಸಿನಕಾಯಿಯವರು, ಅವರು

ಸಂಸತ್ತಿನಲ್ಲಿದ್ದಂಥ ಕಾಲದಲ್ಲಿ ನಾನು ಮತ್ತೊಮ್ಮೆ ಸಂಸತ್ತಿಗೆ ಹೋಗುವ ವಿಶೇಷವಾದ ಅವಕಾಶ ಸಿಕ್ಕಿತ್ತು. ಹಣಕಾಸಿನ ವಿಚಾರಗಳ ಬಗ್ಗೆ ಮೆಣಸಿನಕಾಯಿಯವರ ಅನುಭವ, ಅವರ ಕ್ರಿಯಾಶೀಲ ಟೀಕೆ ಟಿಪ್ಪಣಿಗಳು ನಮ್ಮೆಲ್ಲರನ್ನೂ ಬಹಳ ಮಟ್ಟಿಗೆ ಪ್ರಭಾವಿತರನ್ನಾಗಿಸಿದ್ದವು. ಕಮಿಟಿ ಸಿಸ್ಟಂ ಪಾರ್ಲಿಮೆಂಟ್‌ನಲ್ಲಿ ಬಂದಮೇಲೆ, ಮೆಣಸಿನಕಾಯಿಯವರಂಥವರು ಈ ಕಾಯಿದೆಗಳಿಗೆ ಹಣಕಾಸಿನ ವಿಚಾರಗಳಿಗೆ ವಿಶೇಷವಾದಂಥ ದೃಷ್ಟಿಯನ್ನು ತರಲಿಕ್ಕೆ ಅವರು ಬಹಳ ಮಟ್ಟಿಗೆ ಪ್ರಯತ್ನಿಸಿದರು. ಸಂಭಾವಿತರಾಗಿದ್ದರು, ಸೌಜನ್ಯಶೀಲರಾಗಿದ್ದರು, ಅವರಿಗೆ ಕಾರ್ಯಶ್ರದ್ಧೆ ಇತ್ತು. ಹಾಗೆಯೇ ಮಾನ್ಯ ಲೋಕಯ್ಯ ಶೆಟ್ಟಿಯವರು ಸ್ಟೇಟ್ ಯೂನಿಯನ್‌ನಿಂದ ಬಹಳ ದೊಡ್ಡ ಪರಂಪರೆಯಿಂದ ವಿಧಾನ ಸಭೆಯನ್ನು ಹತ್ತಿದ್ದರು. ಆ ಶ್ರಮಜೀವಿಗಳ ಬಗ್ಗೆ ಬಹಳ ದೊಡ್ಡ ಹೋರಾಟವನ್ನು ಮಾಡಿದರು. ಅದೇ ರೀತಿಯಾಗಿ ಮಧುಗಿರಿಯ ಶ್ರೀ ಎಸ್. ಅಂಜಯ್ಯನವರು ನಮ್ಮ ವಿಧಾನ ಸಭೆಯ ಸದಸ್ಯರಾಗಿದ್ದು ಆ ಭಾಗದ ಜ್ವಲಂತ ಸಮಸ್ಯೆಗಳ ಬಗ್ಗೆ ಅವರು ಸಭೆಯ ಗಮನವನ್ನು ಸೆಳೆಯುತ್ತಿದ್ದರೆಂದು ವ್ಯಕ್ತವಾಗಿದೆ. ನನಗೆ ಬಹಳ ಆತ್ಮೀಯರು ನಮ್ಮ ರಾಜಕೀಯ ಸಂಘರ್ಷದಲ್ಲಿ ಜೊತೆಯ ಹೋರಾಟಗಾರರು ಆಗಿದ್ದಂಥ ಶ್ರೀ ಎ.ಎಂ. ಸೂರ್ಯನಾರಾಯಣ ಗೌಡರವರು ಇತ್ತೀಚೆಗೆ ನಿಧನರಾಗಿದ್ದು ನಮಗೆಲ್ಲರಿಗೂ ಬಹಳ ದುಃಖವನ್ನು ತಂದುಕೊಟ್ಟಿದೆ. ಇನ್ನು ಸಣ್ಣ ವಯಸ್ಸಿನವರು, ಆಗಾಧವಾದಂಥ ಉತ್ಸಾಹ ಮತ್ತು ಸೈದ್ಧಾಂತಿಕ ನೆಲೆಗಟ್ಟನ್ನು ಅವರು ಎಂದೂ ಮರೆತವರಾಗಿರಲಿಲ್ಲ. 1969, 70, 71, 72, ಆ ವರ್ಷಗಳ ರಾಜಕಾರಣವನ್ನು ಮತ್ತು ಆ ವರ್ಷಗಳ ಅತ್ಯಂತ ಪ್ರಭಾವಿ ಬೆಳೆವಣಿಗೆಗಳ ಪರಿಧಿಗೆ ಸೂರ್ಯನಾರಾಯಣಗೌಡರವರು ಸೇರಿದರು. ಶ್ರೀಮತಿ ಇಂದಿರಾ ಗಾಂಧಿಯವರ ನಾಯಕತ್ವವನ್ನು ಬಲಗೊಳಿಸಲು ಅದನ್ನು ಪ್ರಖರಗೊಳಿಸುವ ದಿಶೆಯಲ್ಲಿ ತಮ್ಮನ್ನು ತಾವೇ ಅರ್ಪಿಸಿಕೊಂಡರು. ಬಡವರ, ಶ್ರಮಜೀವಿಗಳ, ದಲಿತರ, ಹಿಂದುಳಿದ ವರ್ಗಗಳ ಮತ್ತು 1970ನೇ ಇಸವಿಯಲ್ಲಿ ನಮ್ಮ ಹೊಸ ಕಲ್ಪನೆಗಳು ಏನೇನು ಇತ್ತು, ಸಮಾಜವಾದಿ ಚೌಕಟ್ಟಿನಲ್ಲಿ ನಮ್ಮ ದೇಶ ಮುಂದುವರಿಯಬೇಕು ಎನ್ನತಕ್ಕಂಥ ಮಹತ್ವಾಕಾಂಕ್ಷೆಗಳನ್ನು ಹೊಂದಿದ್ದಂಥ ನನ್ನ ಮಿತ್ರರ ನಿಧನದಿಂದಾಗಿ ವೈಯಕ್ತಿಕವಾಗಿ ಬಹಳ ವ್ಯಸನ ಉಂಟಾಗಿದೆ, ನಮ್ಮ ಸಾಂಸ್ಕೃತಿಕ ಜೀವನದಲ್ಲಿ ಒಂದು ದೊಡ್ಡ ಶೂನ್ಯವನ್ನು ಅವರು ಸೃಷ್ಟಿಸಿದ್ದಾರೆ. ಇತ್ತೀಚಿನ ವರ್ಷಗಳಲ್ಲಿ ಅವರ ಆರೋಗ್ಯ ಸರಿಯಿಲ್ಲದಿದ್ದರೂ ಅವರ ಚಿಂತನೆಗಳು ನಾವು ನಂಬಿದ ಸಿದ್ಧಾಂತಗಳ ಬಗ್ಗೆಯೇ ಸುಳಿದಾಡುತ್ತಿದ್ದುದನ್ನು ನಾವು ನೆನಪಿಸಿಕೊಳ್ಳಬೇಕಾಗಿದೆ. ಹಾಗೆಯೇ ಶ್ರೀ ಕೆ.ಆರ್. ಶ್ರೀನಿವಾಸ್‌ರವರು, ಗಣ್ಯ ವ್ಯಕ್ತಿಗಳಾದ ಬಾಹ್ಯಾಕಾಶಯಾನಿ ಶ್ರೀಮತಿ ಕಲ್ಪನಾ ಚಾವ್ಲಾ, ಇಡೀ ವಿಶ್ವದಲ್ಲಿಯೇ ಭಾರತ ದೇಶದ ಹೆಸರು ರಾರಾಜಿಸಲು ಶ್ರೀಮತಿ ಕಲ್ಪನಾ ಚಾವ್ಲಾ ಅವರು ತಮ್ಮನ್ನು ತಾವೇ ಸಮರ್ಪಣೆ ಮಾಡಿಕೊಂಡರು. ಕೋಟ್ಯಾಂತರ ಜನ ಆಶಾವಾದಿಗಳು, ಕೋಟ್ಯಾಂತರ ಜನ ಹೊಸ ಹೊಸ ಕನಸುಗಳನ್ನು ಪಡೆದಿದ್ದಂಥ ಯುವ ಜನಾಂಗಕ್ಕೆ ಸ್ಫೂರ್ತಿಯ ಚಿಲುಮೆಯಾಗಿದ್ದರು. ಅದು ದುರಂತದಲ್ಲಿ ಪರ್ಯಾವಸಾನಗೊಳ್ಳುತ್ತದೆ ಎಂದು ನಾವು ಯಾರೂ ನಿರೀಕ್ಷಿಸಿರಲಿಲ್ಲ. ಆದರೆ ಇಂಥ ಸಾಹಸಿ ಕಾರ್ಯಗಳನ್ನು ಕೈಗೊಳ್ಳಬೇಕಾದರೆ ಎಲ್ಲಾ ವಿಧವಾದ ಸಂಭವಗಳಿಗೂ, ಎಲ್ಲಾ ರೀತಿಯ ಸಂಭಾವನೀಯ ದುರಂತಗಳಿಗೂ ಕೂಡ ನಾವು ಸಿದ್ಧರಾಗಿರಬೇಕು, ಅದನ್ನು ಬಹಳ ಸಂತೋಷದಿಂದ ಶ್ರೀಮತಿ ಕಲ್ಪನಾ ಚಾವ್ಲಾರವರು ಮಾಡಿ ನಮ್ಮ ದೇಶಕ್ಕೆ ದೊಡ್ಡ ಹೆಸರು ತಂದುಕೊಟ್ಟರು. ಇದರ ಜೊತೆಗೆ ಮುಂದಿನ ವರ್ಷಗಳಲ್ಲಿ ನಮ್ಮ ಲಕ್ಷಾಂತರ ಯುವಕ-ಯುವತಿಯರ ಆರಾಧ್ಯಮೂರ್ತಿಯಾಗಿ ಇರುತ್ತಾರೆಂದು ನಾನು ಭಾವಿಸುತ್ತೇನೆ.

ಶ್ರೀಮತಿ ಪಂಡರಿಬಾಯಿಯವರು ಕನ್ನಡ ಚಿತ್ರರಂಗದಲ್ಲಿಯಲ್ಲದೆ, ದಕ್ಷಿಣ ಭಾರತದ ಚಿತ್ರರಂಗದಲ್ಲಿಯೂ ಕೂಡ ಬಹಳ ದೊಡ್ಡ ಹೆಸರನ್ನು ಗಳಿಸಿದ್ದರು. ಇವರು ನಟಿಸಿರತಕ್ಕಂಥ ನೂರಾರು ಚಲನಚಿತ್ರಗಳು ಜನರ ಮನದ ಮೇಲೆ ಬಹಳ ದೊಡ್ಡ ಪರಿಣಾಮವನ್ನು ಬೀರಿತ್ತು ಎನ್ನತಕ್ಕಂಥದ್ದನ್ನು ನಾನು ಬಲ್ಲೆ. ಅವರು ನಟಿಸಿರುವ ಬೆಳ್ಳಿಮೋಡ ಮತ್ತು ನಮ್ಮ ಮಕ್ಕಳು ಚಲನಚಿತ್ರದಲ್ಲಿ ಅವರ ಅಭಿನಯಕ್ಕೆ ಕೇವಲ ಶ್ರೇಷ್ಠ ಪೋಷಕ ನಟಿ ಪ್ರಶಸ್ತಿ ಸಿಕ್ಕಿರುವುದಲ್ಲದೆ, ನಮ್ಮ ಕನ್ನಡ ನಾಡಿನ ಚಲನಚಿತ್ರಗಳಲ್ಲಿ ಒಂದು ಹೊಸ ಪರಂಪರೆ, ಈ ಒಂದು ಬೆಳ್ಳಿಮೋಡ ಚಲನಚಿತ್ರದಿಂದ ಪ್ರಾರಂಭವಾಯಿತು. ಈ ಚಿತ್ರದಲ್ಲಿ ಶ್ರೀಮತಿ ಪಂಡರಿಬಾಯಿಯವರು ಬಹಳ ಪ್ರಮುಖರಾಗಿದ್ದರು ಎನ್ನತಕ್ಕಂಥದ್ದನ್ನು ಈ ದಿವಸ ನಾವು ನೆನಪಿಸಿಕೊಳ್ಳುತ್ತೇವೆ. ಅವರು ತಮ್ಮ ಜೀವನದ ಕೊನೆಯ ದಿವಸದಲ್ಲಿ ಬಹಳ ಸಂಕಷ್ಟದಲ್ಲಿ ಸಿಕ್ಕಿಹಾಕಿಕೊಂಡಿದ್ದರು. ಈ ಸಂದರ್ಭದಲ್ಲಿ ನಮ್ಮೆಲ್ಲರ ಪರವಾಗಿ ನಮ್ಮ ಸ್ನೇಹಿತರಾದ ಮತ್ತು ವಾರ್ತಾ ಸಚಿವರಾದಂಥ ಶ್ರೀ ಕಾಗೋಡು ತಿಮ್ಮಪ್ಪನವರು ಚೆನ್ನೈಗೆ ಹೋಗಿ ರಾಜ್ಯ ಸರ್ಕಾರದ ಪರವಾಗಿ ಮತ್ತು ಈ ರಾಜ್ಯದ ಜನಗಳ ಪರವಾಗಿ ಅವರು ಗುಣಮುಖರಾಗಲಿ ಎಂದು ಹಾರೈಸಿದ್ದರು. ಆದರೆ, ನಮ್ಮ ಪ್ರಯತ್ನಗಳು ಫಲಿಸಲಿಲ್ಲ. ಶ್ರೀಮತಿ ಪಂಡರಿಬಾಯಿಯವರು ಅಮರರಾಗಿದ್ದಾರೆ.

ಹಾಗೆಯೇ, ನಮ್ಮ ವಿಧಾನ ಮಂಡಲದ ಕಾರ್ಯದರ್ಶಿಯಾದಂಥ ಶ್ರೀ ತೆ. ಹನುಮಂತಪ್ಪನವರು ನಿಧನ ಹೊಂದಿದ್ದಾರೆ. ಶ್ರೀಯುತರು 1965ನೇ ಇಸವಿಯಲ್ಲಿ ನಮ್ಮ ವಿಧಾನ ಸಭೆಯ ಕಾರ್ಯದರ್ಶಿಯಾಗಿ ಬಂದಂಥ ಸಂದರ್ಭದಲ್ಲಿ ನಾನು ವಿರೋಧ ಪಕ್ಷದ ಸದಸ್ಯನಾಗಿರತಕ್ಕಂಥ ಅವಕಾಶ ಸಿಕ್ಕಿತ್ತು. ಶ್ರೀಯುತರು ಈ ಒಂದು ಕ್ಷೇತ್ರದಲ್ಲಿ ಅಗಾಧವಾದಂಥ ಅಧ್ಯಯನ ಕೂಡ ಮಾಡಿದ್ದರು. ಹಾಗೆಯೇ ಮದರಾಸು ಪ್ರಾಂತ್ಯದಲ್ಲಿ ಈ ಒಂದು ಕ್ಷೇತ್ರಕ್ಕೆ ಸಂಬಂಧಪಟ್ಟಂತೆ ಅಪಾರವಾದಂಥ ಅನುಭವವನ್ನು ಕೂಡ ಪಡೆದುಕೊಂಡಿದ್ದರು. ದೊಡ್ಡ ವ್ಯಕ್ತಿಗಳಾಗಿದ್ದಂಥ ಶ್ರೀ ರಾಜಗೋಪಾಲಾಚಾರ್‌ರವರ ಜೊತೆಯಲ್ಲಿ ಕೆಲಸ ಮಾಡತಕ್ಕಂಥ ಒಂದು ವಿಶೇಷವಾದಂಥ ಅವಕಾಶ ಶ್ರೀ ತೆ. ಹನುಮಂತಪ್ಪನವರಿಗೆ ಸಿಕ್ಕಿತು. ಆನಂತರದ ದಿವಸಗಳಲ್ಲಿ ಶ್ರೀಯುತರು ಬಹಳ ಯಶಸ್ವಿಯಾಗಿ ನಮ್ಮ ರಾಜ್ಯ ವಿಧಾನ ಮಂಡಲದ ಕಾರ್ಯದರ್ಶಿಯಾಗಿ 1965 ರಿಂದ 1976ರವರೆಗೆ ಕಾರ್ಯ ನಿರ್ವಹಿಸಿದ್ದರು. ಇದಾದನಂತರ ಇವರು ಮಾನ್ಯ ಮುಖ್ಯ ಮಂತ್ರಿಯಾಗಿದ್ದಂಥ ಶ್ರೀ ಆರ್. ಗುಂಡುರಾವ್ ಅವರ ರಾಜಕೀಯ ಕಾರ್ಯದರ್ಶಿಯಾಗಿ ಕೂಡ ಕಾರ್ಯ ನಿರ್ವಹಿಸಿದ್ದಾರೆ. ಅನಂತರ, ನಮ್ಮ ವಿಧಾನ ಮಂಡಲದ ಇತಿಹಾಸ ಬರೆಯುವುದಕ್ಕೆ ತಮ್ಮ ಶ್ರಮವನ್ನು ಇದಕ್ಕಾಗಿ ಮೀಸಲಾಗಿಟ್ಟಿದ್ದರು ಎನ್ನತಕ್ಕಂಥದನ್ನು ನಾವು ಬಹಳ ಅಭಿಮಾನದಿಂದ ಸ್ಮರಿಸಬೇಕಾಗಿದೆ. ಮೃತರೆಲ್ಲರ ಆತ್ಮಗಳಿಗೆ ಚಿರಶಾಂತಿ ಸಿಗಲೆಂದು, ಹಾಗು ಅವರ ಕುಟುಂಬ ವರ್ಗದವರಿಗೆ ಇವರುಗಳ ಅಗಲಿಕೆಯಿಂದ ಆಗಿರತಕ್ಕಂಥ ನೋವನ್ನು ಭರಿಸತಕ್ಕಂಥ ಶಕ್ತಿ ಕೊಡಲೆಂದು ಸರ್ಕಾರದ ಪರವಾಗಿ ತಾವು ತಂದಿರತಕ್ಕಂಥ ಠರಾವನ್ನು ನಾನು ಸಮರ್ಥಿಸುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು) :- ಸನ್ಮಾನ್ಯ ಅಧ್ಯಕ್ಷರೆ, ತಾವು ತಂದಿರತಕ್ಕಂಥ ಸಂತಾಪ ಸೂಚನೆಗೆ ನಾನು ಬೆಂಬಲವನ್ನು ವ್ಯಕ್ತಪಡಿಸುತ್ತೇನೆ. ಇವತ್ತಿನ ದಿವಸ ಕೆಲವೊಬ್ಬ ಗಣ್ಯರು ನಮ್ಮನ್ನು ಅಗಲಿದ್ದಾರೆ. ಇವರಲ್ಲಿ ಪ್ರಮುಖರಾಗಿರತಕ್ಕಂಥ ಶ್ರೀ ಬಿ.ಎಂ. ಮೆಣಸಿನಕಾಯಿಯವರು ಹಿರಿಯ ವ್ಯಕ್ತಿ ಹಾಗೂ ಹಿರಿಯ ಜೀವಿ ಕೂಡ ಆಗಿದ್ದರು. ಶ್ರೀಯುತರು ಕೆಳಗಿನ ಹಂತದಿಂದ ತಮ್ಮ ಒಂದು ಸಾರ್ವಜನಿಕ ಸೇವೆಯನ್ನು ಮಾಡಿಕೊಂಡು ಬಂದಿದ್ದರು. ಒಬ್ಬ ಜನಪ್ರತಿನಿಧಿಯಾಗಿ ಹಾಗೂ ಹಾವೇರಿ ಪುರಸಭೆಯ ಅಧ್ಯಕ್ಷರಾಗಿ ಕೆಳಗಿನ

ಹಂತದಿಂದ ಮತ್ತು ವಿಕೇಂದ್ರೀಕರಣದ ಒಂದು ವ್ಯವಸ್ಥೆಯಲ್ಲಿ ಹೆಚ್ಚಿನ ಅನುಭವ ಪಡೆದುಕೊಂಡು ಉತ್ತಮವಾದಂಥ ಆಡಳಿತ ನೀಡಿದಂಥ ವ್ಯಕ್ತಿ ಶ್ರೀ ಬಿ.ಎಂ. ಮೆಣಸಿನಕಾಯಿಯವರು ಆಗಿದ್ದರು. ಹಾಗೆಯೇ ಸ್ಥಳೀಯ ಸಂಸ್ಥೆಗಳಿಂದ ವಿಧಾನ ಪರಿಷತ್‌ಗೆ ಆಯ್ಕೆಗೊಂಡು, ಈ ಒಂದು ಅವಧಿಯಲ್ಲಿ ಸ್ಥಳೀಯ ಸಂಸ್ಥೆಗಳ ಸಮಸ್ಯೆಗಳು ಮತ್ತು ಸ್ಥಳೀಯ ಸಂಸ್ಥೆಗಳು ಆರ್ಥಿಕವಾಗಿ ಯಾವ ರೀತಿಯಾಗಿ ಬಲಯುತವಾಗಿ ಬೆಳೆಯಬೇಕು ಎನ್ನತಕ್ಕಂಥದ್ದನ್ನು ಹಾಗು ಪುರಸಭೆಯಾಗಲಿ ಅಥವಾ ನಗರಸಭೆಯಾಗಲಿ ಅಥವಾ ಗ್ರಾಮ ಪಂಚಾಯಿತಿಗಳು ಆರ್ಥಿಕವಾಗಿ ತಮ್ಮ ಸ್ವಂತ ಬಲದ ಮೇಲೆ ನಿಲ್ಲಬೇಕು ಎಂಬುದರ ಬಗ್ಗೆ ಸಾಕಷ್ಟು ಒತ್ತು ಕೊಟ್ಟಿದ್ದರು. ಹಾಗೆಯೇ, ಇದರ ಬಗ್ಗೆ ಅಧ್ಯಯನ ಕೂಡ ಮಾಡಿದ್ದರು. ಕೆಲವೇ ಅವಧಿಯವರೆಗೆ ಶ್ರೀಯುತರು ಲೋಕಸಭೆಯ ಸದಸ್ಯರೂ ಕೂಡ ಆಗಿದ್ದರು. ಈ ಸಂದರ್ಭದಲ್ಲಿ ಸಾರ್ವಜನಿಕ ಮಹತ್ವವುಳ್ಳ ವಿಷಯಗಳನ್ನು ಮತ್ತು ಅವರ ಭಾಗಕ್ಕೆ ಸಂಬಂಧಪಟ್ಟಂಥ ಹಲವಾರು ವಿಷಯಗಳ ಬಗ್ಗೆ ಲೋಕಸಭೆಯಲ್ಲಿ ಅವರು ಮಾತನಾಡತಕ್ಕುಥದ್ದು ಇವತ್ತು ಕೂಡ ನಮ್ಮ ಕಣ್ಣು ಮುಂದೆ ಇದೆ. ಸಜ್ಜನ ಮತ್ತು ಸರಳ ಹಾಗು ರಾಜಕಾರಣದಲ್ಲಿ ಹೆಚ್ಚಿನ ಅನುಭವ ಹೊಂದಿದಂಥ ಒಬ್ಬ ರಾಜಕಾರಣಿಯನ್ನು ನಾವು ಕಳೆದುಕೊಂಡಿದ್ದೇವೆ. ಅವರ ಆತ್ಮಕ್ಕೆ ಶಾಂತಿ ಕೊಡಲೆಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ. ಹಾಗೆಯೇ, ನಮ್ಮನ್ನು ಅಗಲಿರತಕ್ಕಂಥ ಶ್ರೀ ಎಂ. ಲೋಕಯ್ಯ ಶೆಟ್ಟಿಯವರು ಮತ್ತು ಮಾಜಿ ವಿಧಾನ ಸಭೆಯ ಸದಸ್ಯರಾಗಿ ಸಮಾಜಕ್ಕೆ ಸಾಕಷ್ಟು ಕೆಲಸ ಮಾಡಿರತಕ್ಕಂಥ ಶ್ರೀ ಎಸ್. ಅಂಜಯ್ಯನವರು ಹಾಗು ತಮ್ಮದೇ ಆದಂಥ ರೀತಿಯ ಈ ಒಂದು ಸಮಾಜಕ್ಕೆ ಸೇವೆ ಸಲ್ಲಿಸಿರತಕ್ಕಂಥ ಶ್ರೀ ಎ.ಎಂ. ಸೂರ್ಯನಾರಾಯಣ ಗೌಡರವರು ಹಾಗು ಹಿರಿಯ ವ್ಯಕ್ತಿ ಆಗಿದ್ದಂಥ ಶ್ರೀ ಕೆ.ಆರ್. ಶ್ರೀನಿವಾಸನ್‌ರವರು ನಮ್ಮೆಲ್ಲರನ್ನು ಅಗಲಿದ್ದಾರೆ. ಹಾಗೆಯೇ ಕೊಲಂಬಿಯಾ ಅಂತರಿಕ್ಷನೌಕೆ ದುರಂತದಲ್ಲಿ ಭಾರತದ ಶ್ರೀಮತಿ ಕಲ್ಪನಾ ಚಾವ್ಲಾ ಮೃತಪಟ್ಟಿದ್ದಾರೆ. ಶ್ರೀಮತಿ ಕಲ್ಪನಾ ಚಾವ್ಲಾರವರು ಈ ಒಂದು ದುರಂತವನ್ನು ಅಪ್ಪಿಕೊಂಡು ಹೋದರೆಂದು ನನಗನ್ನಿಸುತ್ತದೆ. ಏಕೆಂದರೆ, ಪಂಜಾಬ್ ರಾಜ್ಯದಲ್ಲಿರತಕ್ಕಂಥ ಒಂದು ಸಣ್ಣ ಗ್ರಾಮದಲ್ಲಿ ಜನಿಸಿದ ಈ ವ್ಯಕ್ತಿ ಹಲವಾರು ಆಸೆಗಳನ್ನು ಹೊತ್ತುಕೊಂಡು ಮತ್ತು ಜೀವನದಲ್ಲಿ ರಿಸ್ಕ್ ತೆಗೆದುಕೊಂಡು ಈ ಫೀಲ್ಡ್‌ನಲ್ಲಿದ್ದು, ಬಾಹ್ಯಾಕಾಶಯಾನಕ್ಕೆ ಹೋಗಬೇಕು ಎನ್ನತಕ್ಕಂಥ ಉತ್ಸುಕತೆಯನ್ನು ಇಟ್ಟುಕೊಂಡು ಹೋದಂಥ ಆದರ್ಶ ವ್ಯಕ್ತಿ ಆಗಿದ್ದರು. ಇವತ್ತಿನ ನಮ್ಮ ಯುವ ಜನಾಂಗಕ್ಕೆ ಇವರು ಆದರ್ಶರಾಗಿದ್ದಾರೆಂದು ಹೇಳಬಹುದು. ಇವತ್ತಿನ ದಿವಸ ರಿಸ್ಕ್ ತೆಗೆದುಕೊಂಡು ಲೈಫ್ ಎದುರಿಸಬೇಕು ಎನ್ನತಕ್ಕಂಥದ್ದನ್ನು ನಮ್ಮ ಯುವ ಜನಾಂಗದವರು ಮರೆತು ಹೋಗಿದ್ದಾರೆ. ಆದ್ದರಿಂದ ಅವರಲ್ಲಿದ್ದಂಥ ಒಂದು ಆದರ್ಶವನ್ನು ನಮ್ಮ ಯುವ ಜನಾಂಗದವರು ಪಾಲನೆ ಮಾಡಬೇಕಾಗಿದೆ. ಅವರ ಸಾಹಸ, ಗುರಿ ಇವತ್ತಿನ ದಿವಸ ನಮ್ಮೆಲ್ಲರಿಗೂ ಆದರ್ಶವಾಗಬೇಕಾಗಿದೆ. ಬಹುಶಃ ಈ ಒಂದು ದುರಂತ ಸಂಭವಿಸದೆ ಇದ್ದಿದ್ದರೆ, ಯಶಸ್ವಿಯಾಗಿ ಆ ಒಂದು ಬಾಹ್ಯಾಕಾಶ ಯಾನವನ್ನು ಮುಗಿಸಿ ಬಂದಿದ್ದಾರೆ, ಹೆಚ್ಚಿನ ಸ್ಫೂರ್ತಿ ಮತ್ತು ಪ್ರೋತ್ಸಾಹ ನಮ್ಮ ಯುವ ಜನಾಂಗಕ್ಕೆ ದೊರೆಯುತ್ತಿತ್ತು. ಅವರ ಮರಣದ ಈ ಸಂದರ್ಭದಲ್ಲಿ ನಮ್ಮ ಯುವ ಶಕ್ತಿ ಆದರ್ಶ ಕಲಿತುಕೊಳ್ಳತಕ್ಕಂಥ ದಾರಿದೀಪವಾಗಲೆಂದು ನನ್ನ ಹಾರೈಕೆ. ಹಾಗೆಯೇ ಶ್ರೀಮತಿ ಪಂಡರಿಬಾಯಿಯವರು ನಮ್ಮ ಕನ್ನಡ ಚಲನಚಿತ್ರ ರಂಗದಲ್ಲಿ ಒಬ್ಬ ಪ್ರತಿಭಾವಂತ ಕಲಾವಿಧರಾಗಿದ್ದರು. ಚಲನಚಿತ್ರ ರಂಗದಲ್ಲಿ ಇವರು ಒಳ್ಳೆಯ ಪ್ರತಿಭೆಯನ್ನು ಪಡೆದಿದ್ದರು. ಇವರ ಚಲನಚಿತ್ರಗಳನ್ನು ನೋಡುವ ಕಲಾ ಪ್ರೇಮಿಗಳು ಇವತ್ತೂ ಕೂಡ ಇದ್ದಾರೆ ಅದರಲ್ಲಿಯೂ

ಮುಖ್ಯವಾಗಿ ಮಹಿಳೆಯರು ಶ್ರೀಮತಿ ಪಂಡರಿಬಾಯಿಯವರ ಅಭಿನಯಕ್ಕೆ ಮಾರು ಹೋಗಿರತಕ್ಕಂಥದನ್ನು ನಾವು ಇವತ್ತೂ ಕೂಡ ನೋಡಬಹುದಾಗಿದೆ. ಇವರು ಉತ್ತಮವಾದ ಅಭಿನಯ ಮಾಡಿ ಹಲವಾರು ಪ್ರಶಸ್ತಿಗಳನ್ನು ಗಳಿಸಿದ್ದಾರೆ. ಇಂಥ ಒಬ್ಬ ಕಲಾವಿಧರು ಇವತ್ತಿನ ದಿವಸ ಕಣ್ಮರೆಯಾಗಿರತಕ್ಕಂಥದ್ದು ದುಃಖ ತರುವಂಥ ಸಂಗತಿಯಾಗಿದೆ. ಹಾಗೆಯೇ, ನಮ್ಮನ್ನು ಅಗಲಿರತಕ್ಕಂಥ ಶ್ರೀ ತೆ. ಹನುಮಂತಪ್ಪನವರು ನಮ್ಮ ವಿಧಾನ ಮಂಡಲದ ಕಾರ್ಯದರ್ಶಿಯಾಗಿ ವಿಧಾನ ಮಂಡಲದ ಕಾರ್ಯದರ್ಶಿಯಾಗಿ ವಿಧಾನ ಮಂಡಲದ ಕಾರ್ಯ ಚಟುವಟಿಕೆಗಳು ಮತ್ತು ನಡವಳಿಕೆಗಳು ಹಾಗು ವಿಧಾನ ಮಂಡಲದ ಇತಿಹಾಸದ ಬಗ್ಗೆ ಸಾಕಷ್ಟು ಅಧ್ಯಯನ ಮಾಡಿದ್ದರು. ಶ್ರೀಯುತರು ನಿವೃತ್ತಿಯಾದ ನಂತರವೂ ಕೂಡ ಈ ಒಂದು ಫೀಲ್ಡ್‌ಗೆ ಹೆಚ್ಚಿನ ಕಾಂಟ್ರಿಬ್ಯೂಷನ್ ಕೂಡ ಸಲ್ಲಿಸಿದ್ದಾರೆ. ಇವತ್ತಿನ ದಿವಸ ಈ ಎಲ್ಲಾ ಗಣ್ಯರು ನಮ್ಮನ್ನು ಅಗಲಿ ಹೋಗಿದ್ದಾರೆ. ಇವರೆಲ್ಲರ ಆತ್ಮಕ್ಕೆ ಶಾಂತಿ ಕೋರಿ ತಾವು ಮಂಡಿಸಿರತಕ್ಕಂಥ ಸಂತಾಪ ಸೂಚನೆಗೆ ನನ್ನ ಬೆಂಬಲವನ್ನು ವ್ಯಕ್ತಪಡಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ) :– ಸನ್ಮಾನ್ಯ ಅಧ್ಯಕ್ಷರೆ, ಕಳೆದ ವಿಧಾನಸಭೆ ಮುಗಿದ ನಂತರ ಮತ್ತು ಈ ವಿಧಾನ ಸಭೆಯ ಮಧ್ಯದಲ್ಲಿ ರಾಜ್ಯದ ವಿವಿಧ ಕ್ಷೇತ್ರದಲ್ಲಿ ಮತ್ತು ರಾಷ್ಟ್ರ ಹಾಗು ರಾಜ್ಯದ ನಿರ್ಮಾಣಕ್ಕೆ ದುಡಿದಿರತಕ್ಕಂಥ ಮಹಾನ್ ವ್ಯಕ್ತಿಗಳ ಮರಣ ಸಂದರ್ಭದಲ್ಲಿ ತಾವು ಮಂಡಿಸಿರತಕ್ಕಂಥ ಸಂತಾಪ ಸೂಚನೆಗೆ ನನ್ನ ಸಹಮತವನ್ನು ವ್ಯಕ್ತಪಡಿಸುತ್ತೇನೆ.

11.30 ಪಿ.ಎಂ

ಈ ಮಹನೀಯರುಗಳ ಜೊತೆಯಲ್ಲಿ ಕೆಲಸ ಮಾಡತಕ್ಕಂಥ ಅವಕಾಶ ನನಗೂ ಸಹಿತ ಸಿಕ್ಕಿತ್ತು. ವಿಶೇಷವಾಗಿ ನಮ್ಮ ಮಾನ್ಯ ಮೆಣಸಿನಕಾಯಿಯವರು ನಮ್ಮ ಪಕ್ಷದ ವತಿಯಿಂದ ವಿಧಾನ ಪರಿಷತ್ತಿನ ಸದಸ್ಯರಾಗಿದ್ದರು, ಲೋಕಸಭೆಯ ಸದಸ್ಯರು ಸಹಿತ ಆಗಿದ್ದರು. ಅವರು ಬಹಳ ನಿಷ್ಠಾವಂತರಾಗಿ ರಾಜಕೀಯ ಕ್ಷೇತ್ರಕ್ಕಿಂತ ಹೆಚ್ಚಾಗಿ ಸಾಮಾಜಿಕ ಕ್ಷೇತ್ರದಲ್ಲಿ ಅತ್ಯಂತ ಪ್ರಾಮಾಣಿಕವಾಗಿ, ಉತ್ತರ ಕರ್ನಾಟಕದ ಅಭಿವೃದ್ಧಿಗೆ ದುಡಿದಿರತಕ್ಕಂಥ ಒಬ್ಬ ವ್ಯಕ್ತಿಗಳಲ್ಲಿ ಮಾನ್ಯ ಮೆಣಸಿನಕಾಯಿಯವರ ಸೇವೆ ಯಾವತ್ತೂ ಸಹಿತ ಮರೆಯುವುದಕ್ಕಾಗುವುದಿಲ್ಲ. ಅವರು ಲೋಕಸಭೆಯ ಸದಸ್ಯರಾಗಿ ಮತ್ತು ವಿಧಾನಪರಿಷತ್ತಿನ ಸದಸ್ಯರಾಗಿ ಪ್ರತಿಯೊಂದು ವಿಚಾರದ ಬಗ್ಗೆ ವಿಶೇಷವಾಗಿ ಹಣಕಾಸು, ಹಣವನ್ನು ಉಳಿತಾಯ ಮಾಡತಕ್ಕಂಥ ವಿಚಾರ, ಸರ್ಕಾರದ ದುಂದು ವೆಚ್ಚಗಳು, ಸರ್ಕಾರಕ್ಕೆ ಬರತಕ್ಕಂಥ ಆದಾಯಗಳು ಕಡಿಮೆಯಾಗತಕ್ಕಂಥದ್ದು, ಅದರ ಸೋರಿಕೆ ಇದರ ಬಗ್ಗೆ ವಿಶೇಷವಾದ ಪರಿಣತಿಯನ್ನು ಗಳಿಸಿಕೊಂಡಿದ್ದವರು, ಅವರು ಸಾಯುವುದಕ್ಕೆ ಮುನ್ನ 15-20 ದಿವಸಗಳ ಹಿಂದೆ ನನಗೆ ಒಂದು ಪತ್ರವನ್ನು ಬರೆದಿದ್ದರು. ಅದು ಸಹಿತ ವಿರೋಧ ಪಕ್ಷದಲ್ಲಿದ್ದುಕೊಂಡು ಸರ್ಕಾರಕ್ಕೆ ಯಾವ ರೀತಿಯಾದ ಸಲಹೆಗಳನ್ನು ಕೊಡಬೇಕು ಎಂದು ಬರೆದಿರುವುದನ್ನು ನಾನು ಮರೆಯಲಿಕ್ಕೆ ಯಾವತ್ತೂ ಸಾಧ್ಯವಿಲ್ಲ. ಅವರು ತಮ್ಮ ಸೇವೆಯನ್ನು ಜೀವನದ ಕೊನೆಯ ಉಸಿರು ಇರುವವರೆಗೂ ಸಹಿತ ಸಾರ್ವಜನಿಕ ಜೀವನಕ್ಕೆ ಮುಡುಪಾಗಿಟ್ಟಂತಹವರು. ಮಾನ್ಯ ಲೋಕಯ್ಯಶೆಟ್ಟಿಯವರು ನಮ್ಮ ಪಕ್ಷದಲ್ಲಿದ್ದುಕೊಂಡು ಸುಮಾರು 1983-85 ರಲ್ಲಿ ವಿಧಾನಸಭೆಯಲ್ಲಿ ನಮ್ಮ ಜೊತೆಯಲ್ಲಿ ಕೆಲಸ ಮಾಡಿದವರು. ವಿಶೇಷವಾಗಿ ಕಾರ್ಮಿಕ ಮುಖಂಡರಾಗಿ ಕಾರ್ಮಿಕರ ಪರವಾಗಿ ಅವರು ಮಾಡಿದ ಕೆಲಸವನ್ನು ಯಾರು ಸಹಿತ ಮರೆಯಲಿಕ್ಕೆ ಸಾಧ್ಯವಿಲ್ಲ. ಅವರು ಬಹಳ ದೊಡ್ಡ ಹೋರಾಟಗಾರರಾಗಿದ್ದರು. ಅವರು

ತಮ್ಮ ಮನಸ್ಸಿಗೆ ತೋಚಿದ್ದನ್ನು ನಿಷ್ಠುರವಾಗಿ ಹೇಳತಕ್ಕಂಥ ಒಂದು ಸ್ವಭಾವ ಅವರದಾಗಿತ್ತು. ಅತ್ಯಂತ ಸ್ನೇಹಮಯಿ ವ್ಯಕ್ತಿತ್ವವನ್ನು ಮಾನ್ಯ ಲೋಕಯ್ಯ ಶೆಟ್ಟಿಯವರು ಹೊಂದಿದ್ದರು. ವಿಶೇಷವಾಗಿ ಮಾನ್ಯ ಸೂರ್ಯನಾರಾಯಣಗೌಡರು, ಕಾಂಗ್ರೆಸ್ ಇಬ್ಭಾಗವಾದಂಥ ಸಂದರ್ಭದಲ್ಲಿ ಸುಮಾರು 1969-70ರಲ್ಲಿ ಆಗ ಒಂದು ವಿಚಾರಧಾರೆಯೇ ಇತ್ತು. ಇವತ್ತು ಈ ವಿಚಾರಧಾರೆಯ ವಿರುದ್ಧವಾಗಿಯೇ ಕಾಂಗ್ರೆಸ್ ಕೆಲಸವನ್ನು ಮಾಡುತ್ತಿದೆ. ಸಮಾಜವಾದಿ ಚಳುವಳಿಯ ಹಿನ್ನಲೆಯಲ್ಲಿ ವಿಶೇಷವಾಗಿ ಮಾನ್ಯ ದೇವರಾಜ ಅರಸುರವರು ಮುಖ್ಯಮಂತ್ರಿಗಳು ಆಗಿದ್ದಂಥ ಸಂದರ್ಭದಲ್ಲಿ ಸೂರ್ಯನಾರಾಯಣಗೌಡರು, ಮಾನ್ಯ ನಮ್ಮ ರಂಗನಾಥರವರು ಆ ಸಮಾಜವಾದಿ ವೇದಿಕೆಯ ಒಬ್ಬ ಸಂಚಾಲಕರೋ ಅಥವಾ ಅಧ್ಯಕ್ಷರಾಗಿದ್ದರು ಎಂದು ಕಾಣುತ್ತದೆ. 1970-74ರ ಸಂದರ್ಭದಲ್ಲಿ ಒಂದು ಸೋಸಿಯಲಿಸ್ಟ್ ಫೋರಂ ಎಂದು ಹೇಳಿ ಲೆಜಿಸ್ಲೇಟರ್ಸ್ ಅನ್ನು ಸೇರಿಸಿ ಮಾಡಿ ಇವರ ಮಾರ್ಗದರ್ಶನದಲ್ಲಿ ಮಾನ್ಯ ಸೂರ್ಯನಾರಾಯಣಗೌಡರು ಬಹಳ ಪ್ರಾಮಾಣಿಕವಾಗಿ ಯುವಕರಿಗೆ ಪ್ರೋತ್ಸಾಹವನ್ನು ಕೊಡತಕ್ಕಂಥ, ವಿಶೇಷವಾಗಿ ಯುವಕರನ್ನು ಬೆಳಸಲಿಕ್ಕೆ ಬಹಳ ಪ್ರಾಮಾಣಿಕವಾಗಿ ದುಡಿದಂಥ ಒಬ್ಬ ನಾಯಕರು ಮಾನ್ಯ ಸೂರ್ಯನಾರಾಯಣಗೌಡರು ಆಗಿದ್ದರು. ಅವರು ತಮ್ಮ ಕೊನೆಯಗಳಿಗೆಯವರೆಗೂ ಸಹಿತ ಸಮಾಜವಾದಿ ವಿಚಾರದಲ್ಲಿಯೇ ನಂಬಿಕೆಯನ್ನು ಇಟ್ಟಿದಷ್ಟೇ ಅಲ್ಲ, ಅತ್ಯಂತ ಜಾತ್ಯಾತೀತ ಮನೋಭಾವನೆಯನ್ನು ಮಾನ್ಯ ಸೂರ್ಯನಾರಾಯಣಗೌಡರು ಬೆಳೆಸಿಕೊಂಡಿದ್ದನ್ನು ನಾವು ನೋಡಿದ್ದೇವೆ. ಅವರು 10-12 ವರ್ಷಗಳಲ್ಲಿ ಅನಾರೋಗ್ಯದಿಂದ ನರಳಿದಂಥ ಸಂದರ್ಭದಲ್ಲಿಯೂ ಸಹಿತ ಅವರಿಗೆ ಇದ್ದಂಥ ನಿಷ್ಠೆ ಮಾತ್ರ ಮೆಚ್ಚತಕ್ಕಂಥದ್ದು. ಇದನ್ನು ನಾನು ಈ ಸಂದರ್ಭದಲ್ಲಿ ಸ್ಮರಿಸಿಕೊಂಡು, ಇದರ ಜೊತೆಗೆ ಶ್ರೀಮತಿ ಕಲ್ಪನಾ ಚಾವ್ಲಾರವರು ರಾಷ್ಟ್ರದ ಇವತ್ತಿನ ಯುವ ಪೀಳಿಗೆಯ ಒಂದು ಸಂಕೇತವೆಂದು ನಾನಾದರೂ ಭಾವಿಸಿಕೊಂಡಿದ್ದೇನೆ. ಅವರ ಸಾಹಸ ಮನೋಭಾವಕ್ಕೆ, ಅವರ ಜೊತೆಗೆ ವೈಜ್ಞಾನಿಕ ಕ್ಷೇತ್ರದಲ್ಲಿ ಇವತ್ತು ಆಗಿರತಕ್ಕಂಥ ಬೆಳವಣಿಗೆಗೆ ಅಂತರಾಷ್ಟ್ರೀಯ ಮಟ್ಟದಲ್ಲಿ ಇಡೀ ದೇಶಕ್ಕೆ ಕೀರ್ತಿಯನ್ನು ತಂದಿರತಕ್ಕಂಥ ಒಬ್ಬ ಮಹಿಳೆಯಾಗಿದ್ದು, ಅವರ ಆಕಸ್ಮಿಕ ನಿಧನ ಇಡೀ ದೇಶಕ್ಕೆ ಅಷ್ಟೇ ಅಲ್ಲ ಇಡೀ ಪ್ರಪಂಚಕ್ಕೆ ಒಂದು ದೊಡ್ಡ ನಷ್ಟವೆಂದು ಹೇಳಿ, ನಾನು ಭಾವಿಸಿಕೊಂಡಿರುತ್ತೇನೆ. ಶ್ರೀಮತಿ ಪಂಡರಿಬಾಯಿಯವರು ಡಾ।। ರಾಜಕುಮಾರ್‌ರವರನ್ನು ಕನ್ನಡ ಚಲನಚಿತ್ರರಂಗದಲ್ಲಿ ನಾವು ಮರೆಯಲಿಕ್ಕೆ ಸಾಧ್ಯವಿಲ್ಲ, ಅದೇ ರೀತಿ ಪಂಡರಿಬಾಯಿಯವರಿಗೂ ಸಹಿತ ಕನ್ನಡಿಗರ ಹೃದಯದಲ್ಲಿ ಶಾಶ್ವತವಾದ ಒಂದು ಸ್ಥಾನಮಾನ ಅವರಿಗೂ ಇತ್ತು. ಅವರು ತಮ್ಮ ಕೊನೆಯ ಜೀವನದಲ್ಲಿ ಬಹಳ ಕಷ್ಟದಲ್ಲಿ ಸಿಕ್ಕಿಹಾಕಿಕೊಂಡು ನರಳಿ ಸತ್ತರು. ಪಂಡರಿಬಾಯಿಯವರ ನೆರವಿಗೆ ಸರ್ಕಾರ ಮೊದಲೇ ಹೋಗಬೇಕಾಗಿತ್ತು. ಅದು ಯಾವ ಕಾರಣದಿಂದಲೋ ಏನೋ ಕೊನೆಯ ಗಳಿಗೆಯಲ್ಲಿ ನಮ್ಮ ಮಾನ್ಯ ವಾರ್ತಾ ಸಚಿವರು ಹೋಗಿ ಅವರನ್ನು ನೋಡಿಕೊಂಡು ಬಂದು ಸರ್ಕಾರದಿಂದ ಸ್ವಲ್ಪ ಸಹಾಯವನ್ನು ಕೊಡತಕ್ಕಂಥ ಅನುಕಂಪವನ್ನು ತಮಿಳುನಾಡಿನ ಮಾನ್ಯ ಮುಖ್ಯಮಂತ್ರಿಗಳು ತೋರಿಸಿದ ಮೇಲೆ ನಮ್ಮ ಸರ್ಕಾರವು ಸಹಿತ ತೋರಿಸಿತು. ಪಂಡರಿಬಾಯಿಯವರು ನಿಜವಾಗಿ ಸಹಿತ ಕನ್ನಡ ಚಲನಚಿತ್ರರಂಗಕ್ಕೆ ಮಾಡಿರತಕ್ಕಂಥ ಒಂದು ಅವಿಸ್ಮರಣೀಯವಾದಂತ ಸೇವೆಯನ್ನು ನಾನು ನೆನೆಸಿಕೊಳ್ಳುತ್ತೇನೆ. ಮಾನ್ಯ ತೆ. ಹನುಮಂತಪ್ಪನವರು ಈ ವಿಧಾನಸಭೆಯ ಕಾರ್ಯದರ್ಶಿಗಳಾಗಿ ಅವರು ಮಾಡಿರತಕ್ಕಂಥ ಕೆಲಸ ಯಾವತ್ತೂ ಸಹಿತ ನಾವು ಮರೆಯಲಿಕ್ಕೆ ಸಾಧ್ಯವಿಲ್ಲ. ವಿಶೇಷವಾಗಿ ಹನುಮಂತಪ್ಪನವರು ನಮ್ಮ ಕುಟುಂಬದವರೊಡನೆ ಬಹಳ ಹತ್ತಿರದ

ಸಂಪರ್ಕವನ್ನು ಇಟ್ಟುಕೊಂಡಿದ್ದವರು. ಅವರು ಸೇನೆಯಲ್ಲಿದ್ದಂಥ ಸಂದರ್ಭದಲ್ಲಿ ನಮ್ಮ ವಂಶಸ್ಥರು ಸಹಿತ ಸೇನೆಯಲ್ಲಿ, ಕೆಲಸವನ್ನು ಮಾಡಿದಂಥ ಸಂದರ್ಭದಲ್ಲಿ ನಮ್ಮ ಹಾಗೂ ಅವರು ಕುಟುಂಬಕ್ಕೆ ಆಗ ಹತ್ತಿರದ ಸಂಬಂಧವಾಗಿತ್ತು. ಹನುಮಂತಪ್ಪನವರು ತಮ್ಮ ಪ್ರಾಮಾಣಿಕ ಜೀವನವನ್ನು ವ್ಯಕ್ತಗತವಾಗಿ ನಡೆಸಿದವರು. ಇಂತಹ ಮಹನೀಯರ ಆತ್ಮಕ್ಕೆ ನಾನು ಶಾಂತಿಯನ್ನು ಕೋರಿ ಇವತ್ತು ಮಾಡಿರುವ ಸಂತಾಪ ಸೂಚನೆಯ ನಿರ್ಣಯಕ್ಕೆ ನಮ್ಮ ಪಕ್ಷದ ವತಿಯಿಂದ ಅವರೆಲ್ಲರಿಗೂ ಸಹಿತ ನಾನು ಮತ್ತೊಮ್ಮೆ ಅವರ ಆತ್ಮಕ್ಕೆ ಶಾಂತಿಯನ್ನು ಕೋರುತ್ತೇನೆ.

ಶ್ರೀ ಚಂದ್ರಕಾಂತ್ ಬೆಲ್ಲದ್ (ಧಾರವಾಡ) :- ಮಾನ್ಯ ಸಭಾಧ್ಯಕ್ಷರೆ, ಇವತ್ತು ತಾವು ತಂದಿರುವಂಥ ಸಂತಾಪ ಸೂಚನೆಗಳಿಗೆ ಬೆಂಬಲಿಸಿ ನಾನು ಕೆಲವು ವ್ಯಕ್ತಿಗಳ ಬಗ್ಗೆ ಮಾತನಾಡಲೇ ಬೇಕಾಗಿದೆ. ಇವತ್ತಿನ ದಿವಸ ನಮ್ಮಿಂದ ಅಗಲಿದಂಥ ಕೆಲವು ಗಣ್ಯರನ್ನು ಸ್ಮರಿಸುವುದರಲ್ಲಿ ನಮ್ಮ ಲೋಕಸಭಾ ಸದಸ್ಯರಾದ ಶ್ರೀ ಬಿ.ಎಂ. ಮೆಣಸಿನಕಾಯಿಯವರು, ಅವರ ಬಗ್ಗೆ ನಮ್ಮ ನಾಯಕರು ಮಾತನಾಡಿದ್ದಾರೆ. ಮೆಣಸಿನಕಾಯಿಯವರು ಒಬ್ಬ ದೊಡ್ಡ ಸೇಲ್ಸ್ ಟ್ಯಾಕ್ಸ್ ಪ್ರಾಕ್ಟೀಷನರ್ ಆಗಿ ಟ್ಯಾಕ್ಸ್ ಕನ್ಸಲ್ಟೆನ್ಸಿಯಾಗಿ, ಅವರು ಬಂದಿದ್ದು ಹಾವೇರಿ ನಗರಸಭೆಯ ಸದಸ್ಯರಾಗಿ ಅವರು ಮಾಡಿದಂಥ ಕಾರ್ಯ ಮೆಚ್ಚುವಂಥದ್ದು. ಅವರು ನಗರಸಭೆಯ ಅಧ್ಯಕ್ಷರಾಗಿ ಇಡೀ ರಾಜ್ಯದ ಎಲ್ಲಾ ಸ್ಥಳೀಯ ಸಂಸ್ಥೆಗಳಿಗೆ ಮಾದರಿಯಾದ ಒಬ್ಬ ಆಡಳಿತಗಾರರಾಗಿ ಮಾಡಿ, ಅನೇಕ ಸ್ಥಳೀಯ ಸಂಸ್ಥೆಗಳ ಆಡಳಿತದ ಬಗ್ಗೆ ಒಳ್ಳೆಯ ಸಲಹೆ ಸೂಚನೆಗಳನ್ನು ಸಹಿತ ಅವರು ಮಾಡಿದ್ದರು. ಬಹುಶಃ ಕರ್ನಾಟಕ ರಾಜ್ಯದ ಎಲ್ಲಾ ಸ್ಥಳೀಯ ಸಂಸ್ಥೆಗಳು ಅವರನ್ನು ಸ್ಮರಿಸಿಕೊಳ್ಳಬೇಕಾಗುತ್ತದೆ. ಅಂತಹ ಕೆಲಸಗಳನ್ನು ಮಾಡುವುದರ ಮೂಲಕ ಅವರು ವಿಧಾನ ಪರಿಷತ್ತಿನ ಸದಸ್ಯರಾಗಿ ಬಂದರು. ಅವರು ವಿಧಾನ ಪರಿಷತ್ತಿನ ಸದಸ್ಯರಾಗಿದ್ದರೂ ಸಹ ಬಹಳ ಉತ್ತಮವಾದ ಸಲಹೆ ಸೂಚನೆಗಳನ್ನು ರಾಜ್ಯದ ಅಭಿವೃದ್ಧಿಯಲ್ಲಿ ಆರ್ಥಿಕ ಅಭಿವೃದ್ಧಿಯಲ್ಲಿ, ಸ್ಥಳೀಯ ಸಂಸ್ಥೆಗಳ ಆಡಳಿತದ ಬಗ್ಗೆ ಒಳ್ಳೆಯ ಆಡಳಿತ ಚತುರರಾಗಿದ್ದರು. ಅವರು ಮುಂದೆ ಲೋಕಸಭೆಗೆ ಆಯ್ಕೆಯಾಗಿ ಬಂದರು. ಅಲ್ಲಿಯೂ ಕೂಡ ಒಳ್ಳೆಯ ಕಾರ್ಯವನ್ನು ಮಾಡುತ್ತಿದ್ದರು. ಪಾಪ ಅವರಿಗೆ ಕೊನೆಯ ಗಳಿಗೆಯಲ್ಲಿ ಬಹಳ ದಿವಸ ನರಳಿದರು. ಅವರನ್ನೂ ಕೂಡ ನಾವು ಇವತ್ತು ಸ್ಮರಿಸಿಕೊಳ್ಳಬೇಕಾಗುತ್ತದೆ. ಅಂತಹ ಒಬ್ಬ ವಿಧಾನ ಪರಿಷತ್ತಿನ ಸದಸ್ಯರಾಗಿ, ಲೋಕಸಭೆಯ ಸದಸ್ಯರಾಗಿ, ಸ್ಥಳೀಯ ಸಂಸ್ಥೆಗಳ ಬಗ್ಗೆ ಮಾರ್ಗದರ್ಶನ ಮಾಡಿದಂಥ ಒಬ್ಬ ವ್ಯಕ್ತಿಯನ್ನು ಇವತ್ತು ನಾವು ಕಳೆದುಕೊಂಡಿದ್ದೇವೆ. ಅದರಂತೆ ಲೋಕಯ್ಯ ಶೆಟ್ಟಿಯವರಾಗಲಿ, ಎಸ್. ಅಂಜಯ್ಯನವರಾಗಲಿ, ಸೂರ್ಯ ನಾರಾಯಣಗೌಡರಾಗಲಿ ಇವರ ಬಗ್ಗೆ ಸಹಿತ ನಾವು ಸ್ಮರಿಸಿಕೊಂಡು, ಅದರ ಜೊತೆಗೆ ನಮ್ಮ ಭಾರತದ ಬಹುದೊಡ್ಡ ವಿಜ್ಞಾನಿ, ಯಾವ ಕೊಲಂಬಿಯಾ ಅಂತರಿಕ್ಷ ನೌಕೆಯಲ್ಲಿ ತನ್ನನ್ನು ಅರ್ಪಣೆ ಮಾಡಿಕೊಂಡಳು ಶ್ರೀಮತಿ ಕಲ್ಪನಾ ಚಾವ್ಲಾ ಆ ಹೆಣ್ಣುಮಗಳ ಬಗ್ಗೆ ಇಡೀ ರಾಷ್ಟ್ರ ಅಷ್ಟೇ ಅಲ್ಲ, ಜಗತ್ತೇ ಇವತ್ತು ಸ್ಮರಿಸಿಕೊಳ್ಳಬೇಕಾಗಿದೆ. ಅಂತಹ ಒಬ್ಬ ಧೀರ ಮಹಿಳೆಯನ್ನು ಪಡೆದಂಥ ಪಂಜಾಬಿನ ಒಂದು ಸಣ್ಣ ಕುಟುಂಬ, ಅವರ ತಾಯಿ ಹೇಳಿದಂತೆ ಮತ್ತು ಕುಟುಂಬದವರೆ ಹೇಳಿದ್ದಾರೆ. ಆಕೆ ಮರಣವನ್ನು ತಾನೇ ಸ್ವೀಕಾರ ಮಾಡಿ ಇಂತಹ ಒಂದು ಛಲದಿಂದ ಇಂತಹ ಒಂದು ಕಾರ್ಯಕ್ಕೆ ಹೋದಳು. ಇಡೀ ತನ್ನ ಶಿಕ್ಷಣದ ವೃತ್ತಿಯಲ್ಲಿ ಒಳ್ಳೆಯ ಚಾಣಾಕ್ಷ್ಯ, ಬುದ್ಧಿವಂತ, ಪ್ರತಿಭಾವಂತ ಮಹಿಳೆಯಾಗಿ, ಒಳ್ಳೆಯ ವಿಜ್ಞಾನಿಯಾಗಿ ಭಾರತದ ಯುವಕ ಯುವತಿಯರಿಗೆ ಇಡೀ ಪ್ರಪಂಚಕ್ಕೆ ಒಬ್ಬ ಆದರ್ಶ ವಿಜ್ಞಾನಿಯಾಗಿ ಇವತ್ತು

ನಮ್ಮನ್ನು ಅಗಲಿದ್ದಾಳೆ. ನಮ್ಮ ಯುವಕ ಯುವತಿಯರಲ್ಲಿ ಆ ಒಂದು ಸ್ಫೂರ್ತಿ ಬರಬೇಕು ಎನ್ನುವ ರೀತಿಯಲ್ಲಿ ಆದರ್ಶ ಮಹಿಳೆಯಾಗಿ ಭಾರತಕ್ಕೆ ಅಷ್ಟೇ ಅಲ್ಲ, ಪ್ರಪಂಚಕ್ಕೆ ಅಂತಹ ಒಂದು ಜೀವಿಯನ್ನು ನಾವು ಕಳೆದುಕೊಂಡಿದ್ದೇವೆಂದು ಹೇಳಿ ನಾವು ದುಃಖವನ್ನು ಪಡಬೇಕಾಗಿದೆ. ಶ್ರೀಮತಿ ಪಂಡರಿಬಾಯಿಯವರು ಬಹುಶಃ ಕನ್ನಡ ಚಿತ್ರಲೋಕಕ್ಕೆ ಮಹಿಳಾ ಚಿತ್ರನಟಿಯಲ್ಲಿ ಬಹುದೊಡ್ಡ ಗೃಹಣಿಯ ಪಾತ್ರವನ್ನು ಮಾಡುವುದರಲ್ಲಿ ಬಹುಶಃ ಅವರನ್ನು ಮೀರಿದಂಥ ಯಾವ ನಟಿಯರು ಇಲ್ಲವೆಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ಒಬ್ಬ ಆದರ್ಶ ಗೃಹಣಿಯ ಪಾತ್ರವನ್ನು ಮಾಡುವುದರ ಮೂಲಕ ಹಾಗೂ ಸಾಂಸಾರಿಕ ಚಿತ್ರವನ್ನು ಮಾಡುವುದರ ಮೂಲಕ ಕೌಟುಂಬಿಕ ಚಿತ್ರಗಳ ಮೂಲಕ ಇಡೀ ಕನ್ನಡ ಜನತೆಯ ಹೃದಯವನ್ನು ಆಕರ್ಷಿಸಿದಂಥ ಒಬ್ಬ ಹೆಣ್ಣುಮಗಳು. ಉತ್ತಮವಾದ ನಟಿಯಾಗಿ, ನಮ್ಮ ಡಾ।। ರಾಜಕುಮಾರ್‌ರವರು ಹೇಗೆ ಒಬ್ಬ ಕನ್ನಡದ ಶ್ರೇಷ್ಠ ನಟನೆಂದು ಹೇಳುತ್ತೇವೆ, ಅದೇ ಪ್ರಕಾರ ಮಹಿಳೆಯರಲ್ಲಿ ಪಂಡರಿಬಾಯಿಯವರು ಅಚ್ಚಳಿಯದಂಥ ಒಬ್ಬ ನಟಿಯಾಗಿ ಕೌಟುಂಬಿಕ ಚಿತ್ರಗಳನ್ನು ಅವರು ಎಷ್ಟು ಕೊಟ್ಟಿದ್ದಾರೆ, ಬಹುಶಃ ಅಷ್ಟೊಂದು ಕೌಟುಂಬಿಕ ಚಿತ್ರಗಳನ್ನು, ಗೃಹಣಿಯ ಚಿತ್ರಗಳನ್ನು, ಸಾಂಸಾರಿಕ ಚಿತ್ರಗಳನ್ನು ಬೇರೆಯಾರೂ ಕೊಟ್ಟಿಲ್ಲವೆಂದು ಹೇಳುತ್ತಾ ಅಂತಹ ಆದರ್ಶವಾದಂಥ ಚಿತ್ರಗಳಲ್ಲಿ ಅವರು ನಟಿಸಿ ಅವರು ನಮ್ಮ ಕನ್ನಡ ಚಲನಚಿತ್ರೋದ್ಯಮಕ್ಕೆ ಅದರ ಹಿರಿಮೆಗೆ ಪಾತ್ರಳಾದ ಒಬ್ಬ ಮಹಿಳೆಯಾಗಿರುತ್ತಾಳೆ.

ಇನ್ನು ಶ್ರೀಯುತ ತೆಲಗಿ ಹನುಮಂತಪ್ಪನವರು, ಇವರ ಬಗ್ಗೆ ಎಲ್ಲರೂ ಮಾತನಾಡಿದ್ದಾರೆ. ಬಹುಶಃ ಕರ್ನಾಟಕ ರಾಜ್ಯದ ವಿಧಾನ ಮಂಡಲದ ಕಾರ್ಯದರ್ಶಿಗಳಾಗಿ ಅವರು ಮಾಡಿದಂತಹ ಕಾರ್ಯವನ್ನು, ವಿಧಾನ ಮಂಡಲದಲ್ಲಿ ಇಲ್ಲಿಯವರೆಗೆ ಬಂದಿರುವಂತಹವರು ಎಲ್ಲರೂ ಅವರ ಮಾರ್ಗದರ್ಶನವನ್ನು ಅನುಕರಣೆ ಮಾಡುವಂತಹ ರೀತಿಯಲ್ಲಿ ಅವರು ನಡೆದುಕೊಂಡಿದ್ದಾರೆ. ಬಹುಶಃ ಅವರು ಅನೇಕ ರಾಜಕಾರಣಿಗಳಿಗೆ, ಯುವಕ ರಾಜಕಾರಣಿಗಳಿಗೆ ಈ ವಿಧಾನ ಮಂಡಲದಲ್ಲಿ ಹೇಗೆ ನಡೆದುಕೊಳ್ಳಬೇಕು, ವಿಧಾನ ಮಂಡಲದ ಕಾರ್ಯ ಕಲಾಪಗಳಲ್ಲಿ ಹೇಗೆ ಭಾಗವಹಿಸಬೇಕು, ಈ ಎಲ್ಲಾ ವಿಷಯಗಳಲ್ಲಿ ಸಾಕಷ್ಟು ಅವರು ಮಾರ್ಗದರ್ಶನವನ್ನು ಮಾಡಿದ್ದಾರೆ. ಅಂತಹವರು ನಮ್ಮ ಕರ್ನಾಟಕದ ಮೈಸೂರು ರಾಜ್ಯದಿಂದ ಹಿಡಿದು ಇಲ್ಲಿಯವರೆವಿಗಿನ ಕರ್ನಾಟಕದ ಇತಿಹಾಸವನ್ನು ಅವರು ನಮಗೆಲ್ಲರಿಗೂ ಕೊಟ್ಟಿದ್ದಾರೆ. ಬಹುಶಃ ಅವರು ಕೊನೆಯ ಒಂದು ಬರಬೇಕಾದಂತಹ ಪುಸ್ತಕ ಬಿಡುಗಡೆಯಾಗಬೇಕಾಗಿದ್ದು ಅದು ಈಗ ಅಚ್ಚಿನಲ್ಲಿದೆ. ಅದೂ ಸಹ ಬಿಡುಗಡೆಯಾಗುವುದರ ಮೂಲಕ ಅವರು ಮಾಡಿದಂತಹ ಕಾರ್ಯವನ್ನು, ಅವರು ಕರ್ನಾಟಕ ವಿಧಾನ ಮಂಡಲಕ್ಕೆ : ಕಾರ್ಯಕಲಾಪಕ್ಕೆ ನೀಡಿದಂತಹ ಕಾರ್ಯ ಸೇವೆಯನ್ನು ನಾವು ಸ್ಮರಿಸಿಕೊಂಡು, ಇವರೆಲ್ಲ ಅಗಲಿದ ಗಣ್ಯರು ಕರ್ನಾಟಕ ರಾಜ್ಯದ ನಾಡಿನ ಅಭಿವೃದ್ಧಿಯಲ್ಲಿ ಪಾಲುದಾರರಾಗಿದ್ದರು ಎಂದು ಹೇಳುತ್ತಾ, ತಾವು ನನಗೆ ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟಿದ್ದಕ್ಕಾಗಿ ತಮ್ಮನ್ನು ಅಭಿನಂದಿಸಿ ನನ್ನ ಸಂತಾಪವನ್ನು ವ್ಯಕ್ತಪಡಿಸಿ ಅವರೆಲ್ಲರ ಕುಟುಂಬಗಳಿಗೆ ಅವರ ಬಂಧುಗಳಿಗೆ ಮತ್ತು ನಾಡಿನ ಜನತೆಗೆ ಅವರ ಅಗಲಿಕೆಯಿಂದ ಉಂಟಾಗಿರತಕ್ಕ ದುಃಖವನ್ನು ಭರಿಸುವ ಶಕ್ತಿಯನ್ನು ಭಗವಂತ ಕರುಣಿಸಲಿ ಎಂದು ಹೇಳಿ ಪ್ರಾರ್ಥಿಸುತ್ತೇನೆ. ಈ ಎಲ್ಲ ಗಣ್ಯರು ಏನು ಒಂದು ಉತ್ತಮ ಆಡಳಿತವನ್ನು ಕೊಟ್ಟಿದ್ದಾರೆ ನಾವು ಸಹಿತ ಅವರ ಮಾರ್ಗದರ್ಶನದಲ್ಲಿ ನಡೆದುಕೊಳ್ಳೋಣವೆಂದು ಹೇಳುತ್ತಾ, ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಎಸ್.ಎಸ್. ಪಾಟೀಲ್ (ಮುಂಡರಗಿ) :- ಸನ್ಮಾನ್ಯ ಅಧ್ಯಕ್ಷರೆ, ತಾವು ತಂದಂತಹ ಸಂತಾಪ ಸೂಚನೆಗೆ ನನ್ನ ಬೆಂಬಲವನ್ನು ಸೂಚಿಸುತ್ತಾ, ಸನ್ಮಾನ್ಯ ಶ್ರೀ ಬಿ.ಎಂ. ಮೆಣಸಿನಕಾಯಿಯವರು ನಮ್ಮ ಜಿಲ್ಲೆಯ ಹಿರಿಯ ನಾಯಕರಾಗಿದ್ದರು. ಅಖಂಡ ಧಾರವಾಡ ಜಿಲ್ಲೆ ಇದ್ದಾಗ ಸುದೈವದಿಂದ ನಾನು ಮೊದಲನೆಯ ಸಲ ಈ ಸದನಕ್ಕೆ ಆರಿಸಿ ಬಂದ ಮೇಲೆ ಮಂತ್ರಿಯಾಗುವಂತಹ ಅವಕಾಶ ನನಗೆ ಒದಗಿಬಂತು. ಆನಂತರ ಧಾರವಾಡ ಜಿಲ್ಲೆಯ ಉಸ್ತುವಾರಿ ಸಚಿವನಾಗಿಯೂ ಕೂಡ ಕೆಲಸ ಮಾಡತಕ್ಕಂತಹ ಒಂದು ಅವಕಾಶ ನನಗೆ ಬಂದಾಗ ನಿಜವಾಗಿಯೂ ನನಗೆ ಹೆಚ್ಚಿನ ಒಂದು ಸಹಾಯ ಮತ್ತು ಸಹಕಾರ ಮತ್ತು ಮಾರ್ಗದರ್ಶನ ಮಾಡಿದಂತಹವರು ಶ್ರೀಯುತರು ಎಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ನನಗೆ ಏನೋ ವಯಸ್ಸಾಗಿರಬಹುದು, ಅನುಭವವಿದ್ದರೂ ಕೂಡ ಆ ಒಂದು ವಿಚಾರದಲ್ಲಿ ಸಂಸದೀಯ ವ್ಯವಸ್ಥೆಯಲ್ಲಿ ನಾನು ಅನಾನುಭವಿಯಾಗಿದ್ದೆ. ನನಗೆ ಎಲ್ಲಾ ಹಂತಗಳಲ್ಲಿಯೂ ಅವರು ಸಹಾಯ ಮಾಡುತ್ತಿದ್ದರು. ಅವರು ನನ್ನ ಮನೆಗೆ ಬಂದು ನನ್ನ ಆಫೀಸ್‌ನಲ್ಲಿ ಕುಳಿತುಕೊಂಡು ಹಲವಾರು ಸಾರಿ ನನಗೆ ಮಾರ್ಗದರ್ಶನವನ್ನು ಮಾಡಿದ್ದಾರೆ. ಅದು ನನಗೆ ಎಂದೂ ನೆನಪು ಹಾರಲಿಕ್ಕೆ ಸಾಧ್ಯವಿಲ್ಲ. ಇನ್ನು ಅವರು ಜಿಲ್ಲಾ ವಿಂಗಡಣೆಯಲ್ಲಿ, ಬಹುಶಃ ಜಿಲ್ಲೆಯು ವಿಂಗಡಣೆಯಾಗುವಾಗ ಮಾನ್ಯ ದಿವಂಗತ ಶ್ರೀ ಜೆ.ಹೆಚ್. ಪಟೇಲ್‌ರವರಿಗೆ ಹಾವೇರಿ ಜಿಲ್ಲೆಯನ್ನು ಮಾಡುವ ಮನಸ್ಸು ಇರಲಿಲ್ಲ. ಹಾವೇರಿಯನ್ನು ಜಿಲ್ಲೆ ಮಾಡುವ ವಿಚಾರ ಯಾವ ವರದಿಯಲ್ಲೂ ಇರಲಿಲ್ಲ. ಅದು ಒಂದೇ ಒಂದು ವರದಿಯಲ್ಲಿತ್ತು. ಕೇವಲ ಗದಗ್ ಮತ್ತು ಧಾರವಾಡ ಎರಡೂ ಆದರೆ ಸಾಕು ಎಂದು ಅವರ ಭಾವನೆ ಇತ್ತು. ಅವರ ಮನಸ್ಸನ್ನು ಒಲಿಸಿ ಹಾವೇರಿಯನ್ನು ಜಿಲ್ಲೆಯನ್ನಾಗಿ ಮಾಡುವಂತಹ ವಿಚಾರದಲ್ಲಿ ಸಹಾಯ ಮಾಡಿದಂತಹವರು ಶ್ರೀಯುತ ಬಿ.ಎಂ. ಮೆಣಸಿನಕಾಯಿಯವರು ಎಂದು ಹೇಳಿದರೆ ತಪ್ಪಾಗಲಾರದು. ಹಾವೇರಿ ಜಿಲ್ಲೆಯಾಗುವುದಕ್ಕೆ ಮೂಲತಃ ಶ್ರೀ ಜೆ.ಹೆಚ್. ಪಟೇಲ್‌ರವರ ಮನ ಒಲಿಸಿ, ಹಾವೇರಿಯನ್ನು ಜಿಲ್ಲೆಯನ್ನಾಗಿ ಮಾಡುವುದಕ್ಕೆ ಇದರಲ್ಲಿ ಬಹಳ ಪ್ರಮುಖವಾದಂತಹ ಪಾತ್ರವನ್ನು ವಹಿಸಿ, ಮಾಡಿದರು ಎಂದು ಹೇಳಿದರೆ ಅದು ತಪ್ಪಾಗುವುದಿಲ್ಲ. ಒಬ್ಬ ಪ್ರಾಮಾಣಿಕ ರಾಜಕಾರಣಿ ಬಹುಶಃ ನನಗೆ ತಿಳಿದಮಟ್ಟಿಗೆ ಅವರ ಸಂಸದೀಯ ವ್ಯವಹಾರದಲ್ಲಿ ತಾವು ನಡೆದುಕೊಂಡಂತಹ ರೀತಿಯನ್ನು ಪುಸ್ತಕ ರೂಪದಲ್ಲಿ ಹೊರತಂದಿದ್ದಾರೆ. ಮಾನ್ಯ ಅಧ್ಯಕ್ಷರೆ, ಇದನ್ನು ತಾವೂ ಸಹ ನೋಡಿರಬಹುದು. ಅವರು 6 ವರ್ಷಗಳ ಕಾಲ ವಿಧಾನ ಪರಿಷತ್ತಿನಲ್ಲಿ ಸದಸ್ಯರಾಗಿದ್ದ ಅವಧಿಯಲ್ಲಿ ನಾನು ಏನೇನು ಮಾಡಿದ್ದೆ ಎಂಬುದರ ಬಗ್ಗೆ ಸದನದಲ್ಲಿ ಹೇಗೆ ನಡೆದುಕೊಳ್ಳಬೇಕು ಏನೇನು ಆಗಬೇಕು ಎಂಬುದರ ಬಗ್ಗೆ ಸಂಪೂರ್ಣವಾಗಿ ಪುಸ್ತಕ ರೂಪದಲ್ಲಿ ಅವರು ಹೊರತಂದಿದ್ದಾರೆ. ಹಾಗೆಯೇ ನಾವು ನಮ್ಮ ನಮ್ಮ ಜೀವನದಲ್ಲಿ ಏನೇನು ಸಂಸದೀಯ ವ್ಯವಸ್ಥೆಯಲ್ಲಿ ಮಾಡಿದ್ದೇವೆ ಎಂಬುದರ ಬಗ್ಗೆ ಪುಸ್ತಕ ರೂಪದಲ್ಲಿ ಹೊರತಂದರೆ ಖಂಡಿತವಾಗಿಯೂ ನಮಗೆ ಅದು ಶ್ರೇಯಸ್ಸು ಆಗುತ್ತದೆ, ಅದು ಮುಂದಿನ ಪೀಳಿಗೆಯವರಿಗೆ ಮಾರ್ಗದರ್ಶನವಾಗುತ್ತದೆ. ಆ ಪುಸ್ತಕವನ್ನು ನೋಡಿದರೆ, ಮುಂದೆ ಬರತಕ್ಕಂತಹ ಈ ಒಂದು ಸಂಸತ್ತಿನಲ್ಲಿ ಬರತಕ್ಕಂತಹ ವಿಧಾನಸಭೆ ಹಾಗೂ ವಿಧಾನಪರಿಷತ್ತಿನಲ್ಲಿ ಬರತಕ್ಕಂತಹವರಿಗೆ ಅದು ಮಾರ್ಗದರ್ಶನವಾಗುತ್ತದೆ. ಆ ಪುಸ್ತಕವನ್ನು ಅಷ್ಟು ಸುಂದರವಾಗಿ ಶ್ರೀಯುತರು ಬರೆದಿದ್ದಾರೆ. ಹಾಗೆಯೇ ಒಬ್ಬ ಪ್ರಾಮಾಣಿಕ ರಾಜಕಾರಣಿ ಹಾಗೂ ನಿಜವಾಗಿಯೂ ನಮ್ಮನ್ನು ಆಗಲಿದ್ದು ಬಹಳ ನೋವಾಗುತ್ತದೆ. ಅದರಲ್ಲಿಯೂ ನಮ್ಮ ಧಾರವಾಡ ಜಿಲ್ಲೆಗೆ ತುಂಬಲಾರದಂತಹ ಹಾನಿಯಾಗಿದೆ ಎನ್ನುವಂತಹ ಮಾತನ್ನು ಈ

ಸಂದರ್ಭದಲ್ಲಿ ಹೇಳುತ್ತಾ ಅವರ ಆತ್ಮಕ್ಕೆ ಕೂಡ ನಾನು ಶಾಂತಿಯನ್ನು ಕೋರುತ್ತೇನೆ. ಇನ್ನು ಶ್ರೀ ಎಂ. ಲೋಕಯ್ಯ ಶೆಟ್ಟರು, ಶ್ರೀ ಎಸ್. ಅಂಜಯ್ಯನವರು, ಶ್ರೀ ಎ.ಎಂ. ಸೂರ್ಯನಾರಾಯಣಗೌಡರು, ಶ್ರೀ ಕೆ.ಆರ್. ಶ್ರೀನಿವಾಸ್‌ರವರು ಇವರೆಲ್ಲರೂ ಕೂಡ ಅಪಾರವಾದಂತಹ ಸೇವೆಯನ್ನು ಸಲ್ಲಿಸಿದ್ದಾರೆ. ಅವರೆಲ್ಲರ ಆತ್ಮಕ್ಕೂ ಕೂಡ ನಾನು ಶಾಂತಿಯನ್ನು ಸಲ್ಲಿಸುತ್ತೇನೆ. ಅತಿ ಮುಖ್ಯವಾಗಿ ಶ್ರೀಮತಿ ಕಲ್ಪನಾ ಚಾವ್ಲಾರವರ ಬಗ್ಗೆ ಹೇಳುವುದಾದರೆ, ಅಂಥವರು ನಮ್ಮ ದೇಶಕ್ಕೆ ಹುಟ್ಟಿ ಬರುವುದೇ ಅಪರೂಪ ಅವರು ಬಹಳ ಅಪರೂಪವಾದಂತಹ ವಿಜ್ಞಾನಿಯಾಗಿದ್ದರು. ಬಹುಶಃ ಆ ತಾಯಿ ಮಾಡಿದಂತಹ ಸಾಹಸವನ್ನು ನಾವು ನೋಡಿದರೆ ನಿಜವಾಗಿಯೂ ನಮಗೆ ಹೆಮ್ಮೆಯೆನಿಸುತ್ತದೆ. ನಾವೆಲ್ಲರೂ ಆ ದೇವರಲ್ಲಿ ಪ್ರಾರ್ಥಿಸೋಣ ಪುನಃ ಆ ತಾಯಿಯು ನಮ್ಮ ಭಾರತದಲ್ಲಿ ಹುಟ್ಟಿಬರಲಿ, ಆಕೆಯಿಂದ ಇನ್ನು ಹಲವಾರು ಸೇವೆಯು ಈ ವಿಜ್ಞಾನ ಕ್ಷೇತ್ರಕ್ಕೆ ಆಗಲಿ ಎಂದು ನಾನು ಪ್ರಾರ್ಥಿಸಿ, ಆ ತಾಯಿಯ ಆತ್ಮಕ್ಕೆ ಶಾಂತಿ ಸಿಗಲಿ ಎಂದು ದೇವರಲ್ಲಿ ಪ್ರಾರ್ಥಿಸಿ ನಾನು ಈ ಸಂದರ್ಭದಲ್ಲಿ ಸಂತಾಪವನ್ನು ಸೂಚಿಸುತ್ತಿದ್ದೇನೆ. ಶ್ರೀಮತಿ ಪಂಡರಿಬಾಯಿಯವರ ಬಗ್ಗೆ ಹೇಳುವುದಾದರೆ, ಬಹುಶಃ ಅವರು ರಂಗಭೂಮಿಯ ಮೂಲಕ ಈ ಕ್ಷೇತ್ರಕ್ಕೆ ಪ್ರವೇಶ ಮಾಡಿದವರು. ಬಹಳ ಪ್ರಚಾರವನ್ನು ಹೊಂದಿದವರಾಗಿದ್ದಾರೆ, ಅವರು ಚಿತ್ರದಲ್ಲಿ, ರಂಗಭೂಮಿಯಲ್ಲಿಯೂ ಕೂಡ ಅವರದೇ ಆದ ಛಾಪನ್ನು ಒತ್ತಿ ಹೋಗಿದ್ದಾರೆ. ಬಹುಶಃ ಅಂತಹವರು ಹುಟ್ಟಿ ಬರುವುದು ಕಷ್ಟವಾಗಿದೆ. ಬಹುಶಃ ಅಂತಹ ಒಬ್ಬ ಕಲಾವಿದೆಯು ಸಿಗುವುದು ಅಷ್ಟೇ ಕಷ್ಟವಿದೆ. ಅಂತಹ ಕಲಾವಿದೆಗೂ ಕೂಡ ನಾನು ದುಃಖವನ್ನು ವ್ಯಕ್ತಪಡಿಸುತ್ತಾ, ಇನ್ನು ಶ್ರೀ ಟಿ. ಹನುಮಂತಪ್ಪನವರು ಇವರೆಲ್ಲರಿಗೂ ಕೂಡ ತಾವು ಏನು ಒಂದು ಸಂತಾಪ ಸೂಚನೆಯನ್ನು ತಂದಿದ್ದೀರಿ ಅದಕ್ಕೆ ನಾನು ನನ್ನ ಸಹಮತಿಯನ್ನು ಸೂಚಿಸುತ್ತಾ ಅವರೆಲ್ಲರಿಗೂ ಆತ್ಮಕ್ಕೆ ದೇವರು ಶಾಂತಿಯನ್ನು ನೀಡಲೆಂದು ಹೇಳುತ್ತಾ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಸಿ. **ಬೈರೇಗೌಡ (ವೇಮಗಲ್)** :- ಮಾನ್ಯ ಸಭಾಧ್ಯಕ್ಷರೆ, ಇವತ್ತಿನ ದಿವಸ ತಾವು ಹಲವಾರು ಮಂದಿ ನಿಧನ ಹೊಂದಿರತಕ್ಕಂತಹವರ ಬಗ್ಗೆ ಸಂತಾಪ ಸೂಚನೆಯನ್ನು ತಾವು ಮಂಡಿಸಿದ್ದೀರಿ, ಈ ಸಂತಾಪ ಸೂಚನೆಗೆ ನನ್ನ ಬೆಂಬಲವನ್ನು ಸೂಚಿಸುತ್ತಾ, ಅದರಲ್ಲಿಯೂ ಮುಖ್ಯವಾಗಿ ಇವತ್ತು ನಾವು ಹನುಮಂತಪ್ಪನವರ ಬಗ್ಗೆ ಹೇಳುವುದಾದರೆ, ಅವರು ಈ ಸನ್ಯಾಸ್ಯ ಸಭೆಯ ಕಾರ್ಯದರ್ಶಿಗಳಾಗಿದ್ದರು, 1972ನೇ ಇಸವಿಯಲ್ಲಿ ನಾನು ಮೊದಲನೆಯ ಸಲ ಈ ಸದನವನ್ನು ಪ್ರವೇಶ ಮಾಡಿದಂತಹ ಸಂದರ್ಭದಲ್ಲಿ ನಾವು ಆಗ ಹೊಸಬರಾಗಿದ್ದೆವು, ವಿಧಾನಮಂಡಲದ ಕಾರ್ಯವಿಧಾನ, ಯಾವ ರೀತಿಯಾಗಿ ಸದನದಲ್ಲಿ ನಡೆದುಕೊಳ್ಳಬೇಕು, ಯಾವ ರೀತಿಯಾಗಿ ಪ್ರಶ್ನೆಯನ್ನು ಕೇಳಬೇಕು, ನಾನು ಯಾವ ರೀತಿಯಾಗಿ ಉತ್ತರವನ್ನು ಪಡೆಯಬೇಕು, ಯಾವ ರೀತಿಯಾಗಿ ಮಾತನಾಡಬೇಕು ಎನ್ನುವಂತಹ ಪರಿಚಯ ನಮಗೆ ಅಷ್ಟಾಗಿ ಬರಲಿಲ್ಲ. ಆಗಾಗ ನಾನು ಅವರನ್ನು ಭೇಟಿ ಮಾಡುವಂತಹದ್ದು ನಾನು ಅವರ ಹತ್ತಿರ ವಿಚಾರ ವಿನಿಮಯ ಮಾಡುವಂತದ್ದು, ಅವರು ನೀಡುವಂತಹ ಸಲಹೆಗಳು ಮಾತನಾಡುವುದರಲ್ಲಿ ಇಂತಹದ್ದನ್ನು ಎತ್ತಿ ತೋರಿಸಬೇಕು, ಪ್ರಶ್ನೋತ್ತರ ವೇಳೆಯಲ್ಲಿ ಈ ರೀತಿಯಾಗಿರಬೇಕು, ರೀತಿ ಮತ್ತು ರಿವಾಜುಗಳನ್ನು ಮತ್ತು ಈ ಕಾರ್ಯಕಲಾಪಗಳಲ್ಲಿ ಯಾವ ರೀತಿಯಾಗಿ ನಡವಳಿಕೆಗಳನ್ನು ನಡೆದುಕೊಳ್ಳಬೇಕು ಎನ್ನುವಂತಹದ್ದನ್ನು ಅವರ ಮಾಗದರ್ಶನದಿಂದ ನಾನಂತು ಕೂಡ ಹೊಸಬನಾದಂತಹ ಕಾರಣದಿಂದ ಪ್ರಭಾವಿತನಾಗಿದ್ದೇನೆ. ಅವರಿಗೂ ಕೂಡ ಅಪಾರವಾದಂತಹ ಜ್ಞಾನವಿತ್ತು, ಈ ವಿಧಾನ

ಮಂಡಲದ ಮದ್ರಾಸ್ ಪ್ರಾಂತ್ಯದ ವಿಧಾನ ಸಭೆಯಲ್ಲಿಯೂ ಕೂಡ ಕೆಲಸ ಮಾಡಿರುವಂತಹ ಅನುಭವ ಅವರಿಗಿತ್ತು. ಅವನ್ನು ಅಲ್ಲಿಂದ ಇಲ್ಲಿಗೆ ಎರವಲು ಸೇವೆಯಲ್ಲಿ ತಂದು ಇಲ್ಲಿ ಈ ವಿಧಾನ ಮಂಡಲದ ವ್ಯವಹಾರಕ್ಕೆ ಮತ್ತು ಮಂಡಲಕ್ಕೆ ಒಂದು ಉಚ್ಚಾಯ ಸ್ಥಿತಿಯನ್ನು ಮತ್ತು ಗೌರವವನ್ನು ತಂದುಕೊಟ್ಟಂತಹ ವ್ಯಕ್ತಿ ಶ್ರೀಯುತ ಹನುಮಂತಪ್ಪನವರು. ಅವರ ಮಾಗದರ್ಶನದಲ್ಲಿ ನಾನಂತು ಕೂಡ ಹೆಚ್ಚಿನದನ್ನು ಕಲಿತಿದ್ದೇನೆ, ಇವತ್ತು ಇಷ್ಟೊಂದು ಸಾರಿ ಎದ್ದು ನಿಂತು ಅವರ ಬಗ್ಗೆ ಮಾತನಾಡಬೇಕಾದರೆ ಅವರು ಬಹುಮಟ್ಟಿಗೆ ಕಾರಣಕರ್ತರಾಗಿದ್ದಾರೆ ಎನ್ನುವಂತಹ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಶ್ರೀ ಕೆ.ಆರ್. ಶ್ರೀನಿವಾಸನ್‌ರವರ ಬಗ್ಗೆ ಹೇಳುವುದಾದರೆ ಅವರು ನಮ್ಮ ಜಿಲ್ಲೆಯವರು, ನಮ್ಮ ಜಿಲ್ಲೆಯಲ್ಲಿ ಹುಟ್ಟಿದ್ದಾರೆ, ನಾವೆಲ್ಲರೂ ಸಣ್ಣ ಸಣ್ಣ ಹುಡುಗರಾಗಿದ್ದಾಗಿನಿಂದಲೂ ಕೂಡ ನಾನು ಅರರ ಸಂಪರ್ಕವನ್ನು ಇಟ್ಟುಕೊಂಡಿದ್ದೆ, ಅವರು ಪ್ರಖ್ಯಾತ ಪತ್ರಕರ್ತರಾಗಿದ್ದರು, ಜೊತೆಗೆ ಪ್ರಜಾಪ್ರತಿನಿಧಿ ಸಭೆಯ ಸದಸ್ಯರಾಗಿದ್ದರು, ಅವರ ಕುಟುಂಬದವರು ಇರಬಹುದು, ಉಳಿದಿರತಕ್ಕಂತಹವರು, ಬೇರೆ ಬೇರೆಯವರು ಅವರು ಸಂಬಂಧಿಕರಾಗಿರತಕ್ಕಂತಹ ಒಬಾಳ್‌ಚಾರ್ ಇರಬಹುದು ಅವರೆಲ್ಲರೂ ಸಹ ಸ್ವಾತಂತ್ರ್ಯಕ್ಕೋಸ್ಕರ ಹೋರಾಡಿದವರು ಅಂದಿನ ಆ ಕಾಲದಲ್ಲಿ ಕೋಲಾರ ಜಿಲ್ಲೆಯಲ್ಲಿ ಶ್ರೀ ಕೆ.ಸಿ. ರೆಡ್ಡಿಯವರ ಜೊತೆಗೆ, ಶ್ರೀ ಎಂ.ವಿ. ಕೃಷ್ಣಪ್ಪನವರ ಜೊತೆಗೆ, ಶ್ರೀ ನಾಗಯ್ಯರೆಡ್ಡಿಯವರ ಜೊತೆಗೆ ಮತ್ತು ಶ್ರೀ ಗಂಗಿರೆಡ್ಡಿಯವರ ಜೊತೆಗೆ ಇರರ ಜೊತೆಯಲ್ಲಿಯೂ ಕೂಡ ನಾನು ಅವರ ಹೆಗಲಿಗೆ ಹೆಗಲನ್ನು ಕೊಟ್ಟು ಸ್ವಾತಂತ್ರ್ಯ ಹೋರಾಟದಲ್ಲಿ ದುಡಿದಿರತಕ್ಕಂತಹವರು, ನನಗೆ ಹೆಚ್ಚಿನ ಮಾರ್ಗದರ್ಶನವನ್ನು ನೀಡಿರತಕ್ಕಂತಹವರಲ್ಲಿ ಶ್ರೀ ಶ್ರೀನಿವಾಸ್‌ರವರು ಕೂಡ ಒಬ್ಬರೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಮತ್ತೆ ಶ್ರೀ ಸೂರ್ಯನಾರಾಯಣಗೌಡರು, ಅವರು ನಾವು ಒಟ್ಟಿಗೆ ವ್ಯಾಸಂಗ ಮಾಡುತ್ತಿದ್ದೆವು. ಅವರು ನನಗೆ ಬಹಳ ಸೀನಿಯರ್ ಆಗಿ ಕಾಲೇಜಿನಲ್ಲಿ ಓದುತ್ತಿದ್ದರು. ಅವರು ಇಂಟರ್‌ಮಿಡಿಯೆಟ್ ಕಾಲೇಜಿನಲ್ಲಿ ಓದುತ್ತಿದ್ದಾರೆ, ಆಗ ನಾನು ಕೋಲಾರದಲ್ಲಿ ಎಸ್‌ಎಸ್‌ಎಲ್‌ಸಿ ಓದುತ್ತಿದ್ದೆ. ಅವರೂ ಸಹ ಉತ್ತಮ ಕುಟುಂಬದಿಂದ ಬಂದವರಾಗಿದ್ದಾರೆ, ಅವರು ಶಿಡ್ಲಘಟ್ಟ ಗ್ರಾಮದ ಹಾನೂರು ಗ್ರಾಮದವರಾಗಿದ್ದರು, ಅವರು ರೈತ ಕುಟುಂಬದಿಂದ ಬಂದವರಾಗಿದ್ದರು. ಅವರು ಯಾವತ್ತು ಸಹ ಕುಟುಂಬದವರಿಗೆ ಬಹಳ ಆಪ್ಯಾಯಮಾನವಾದಂತಹ ವ್ಯಕ್ತಿಯಾಗಿದ್ದರು. ಇವರು ಸಹ ಒಳ್ಳೆಯ ಗುಣಗಳನ್ನು ರೂಡಿಸಿಕೊಂಡಿದ್ದರು. ಈ ಕಾಲದಲ್ಲಿ ಸೂರ್ಯನಾರಾಯಣಗೌಡರಂತಹ ರಾಜಕಾರಣಿಗಳು ಬಹಳ ಅಪರೂಪ, ಅಪರೂಪದಲ್ಲಿ ಅಪರೂಪವಾಗಿದ್ದಂತಹ ಶ್ರೀಯುತ ಸೂರ್ಯನಾರಾಯಣ ಗೌಡರು ಸಹ ನಿಧನರಾಗಿದ್ದಾರೆ. ಕೊನೆಗಾಲದಲ್ಲಿ ಅವರಿಗೆ ಈ ರೀತಿಯಾದಂಥ ದುರ್ಗತಿ ಬರಬಾರದಾಗಿತ್ತು. ಅವರಿಗೆ ಲಕ್ವ ಹೊಡೆದು ಕಳೆದ 5-6 ವರ್ಷಗಳಿಂದ ಹಾಸಿಗೆ ಮೇಲೆಯೇ ಇದ್ದರು. ನಾನು ಮತ್ತು ಸ್ನೇಹಿತರಾದ ಸಿಂಧ್ಯಾರವರು 2-3 ಸಾರಿ ಅವರನ್ನು ಮಾತನಾಡಿಸಿಕೊಂಡು ಬಂದಿರುತ್ತೇವೆ. ಅವರೂ ಸಹ ಇವತ್ತಿನ ದಿವಸ ನಿಧನರಾಗಿದ್ದಾರೆ. ಶ್ರೀಮಾನ್ ಲೋಕಯ್ಯ ಶೆಟ್ಟಿಯವರು ನಮ್ಮ ಕಾರ್ಮಿಕರ, ಅದರಲ್ಲೂ ಸಹ ಕಡಲ ತೀರದಲ್ಲಿರತಕ್ಕಂತಹ ಕಾರ್ಖಾನೆಗಳು ಅದು ಎಂ.ಸಿ.ಎಫ್ ಇರಬಹುದು, ಮಂಗಳೂರಿನ ನವಬಂದರು ಇರಬಹುದು, ಈ ರೀತಿಯಾಗಿ ಕಾರ್ಮಿಕರನ್ನು ಸಂಘಟನೆ ಮಾಡಿ ಆ ಭಾಗದಲ್ಲಿ ಕಾರ್ಮಿಕರಿಗೆ ದೊಡ್ಡ ಧಣಿಯಾಗಿ ಇದ್ದಂತಹ ಲೋಕಯ್ಯ ಶೆಟ್ಟಿಯವರು ಸಹ ಇವತ್ತಿನ ದಿವಸ ತೀರಿಕೊಂಡಿದ್ದಾರೆ. ಶ್ರೀ ಬಿ.ಎಂ. ಮೆಣಸಿನಕಾಯಿ ಅವರು ನಮ್ಮ ಪಕ್ಷದಲ್ಲಿ ಬಹಳ ಎತ್ತರದ

ಮುಖಂಡರಾಗಿ ಇದ್ದಂತಹವರು, ಅವರು ಸಹ ತೀರಿಕೊಂಡಿದ್ದಾರೆ. ಅವರು ಲೋಕಸಭೆಯಲ್ಲಿ ಒಂದು ಸಾರಿ ಪ್ರತಿನಿಧಿಸತಕ್ಕಂತಹ ಅವಕಾಶವನ್ನು ಆ ಭಾಗದ ಜನರು ನೀಡಿದ್ದರು. ಇವರೆಲ್ಲರೂ ನಿಧನರಾಗಿರತಕ್ಕಂತಹರ ಬಗ್ಗೆ ತಮ್ಮ ಜೊತೆಗೆ ನನ್ನ ಶೋಕವನ್ನು ಸಹ ವ್ಯಕ್ತಪಡಿಸುತ್ತಾ ಅವರೆಲ್ಲರಿಗೂ ಚಿರಶಾಂತಿಯು ದೊರೆಯಲಿ ಅನ್ನತಕ್ಕಂತಹ ಮಾತನ್ನು ಹೇಳಿ ತಮಗೂ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಸ್. ಯೋಗೀಶ್ ಭಟ್ (ಮಂಗಳೂರು) :- ಸನ್ಮಾನ್ಯ ಅಧ್ಯಕ್ಷರೆ, ತಾವು ಮಂಡಿಸಿರತಕ್ಕಂತಹ ಸಂತಾಪ ಸೂಚಕ ನಿರ್ಣಯಕ್ಕೆ ನನ್ನ ಬೆಂಬಲವನ್ನು ಸೂಚಿಸುತ್ತಾ, ವಿಶೇಷವಾಗಿ ನನ್ನ ಮಂಗಳೂರು ಕ್ಷೇತ್ರಕ್ಕೆ ನಿವಾಸಿಯಾಗಿದ್ದು ನಮಗೆ ನಿರಂತರವಾಗಿ ಮಾಗದರ್ಶನವನ್ನು ನೀಡಿದಂತಹ ಸನ್ಮಾನ್ಯ ಲೋಕಯ್ಯ ಶೆಟ್ಟಿಯವರ ಆತ್ಮಕ್ಕೆ ಚಿರಶಾಂತಿಯನ್ನು ಕೋರುವ ದೃಷ್ಟಿಯಿಂದ ಕೆಲವು ಮಾತುಗಳನ್ನು ಹೇಳಲಿಚ್ಛಿಸುತ್ತೇನೆ. ಕ್ವಿಟ್ ಇಂಡಿಯಾ ಚಳುವಳಿ ಮೂಲಕ ರಾಷ್ಟ್ರೀಯ ಸ್ವಾತಂತ್ರ್ಯ ಹೋರಾಟದಲ್ಲಿ ಪ್ರವೇಶ ಮಾಡಿಕೊಂಡು ಅದರ ನಂತರ ಸಾಮಾಜಿಕ ಜೀವನದಲ್ಲಿ ಪ್ರವೇಶಿಸಿದಂತಹ ಒಂದು ಚೈತನ್ಯ, ಚೇತನ ಶ್ರೀ ಲೋಕಯ್ಯಣ್ಣ. ನಮ್ಮ ಕ್ಷೇತ್ರದಲ್ಲಿ ಅವರನ್ನು ಲೋಕಯ್ಯಶೆಟ್ಟಿ ಎಂದು ಕರೆಯುವುದು ಕಮ್ಮಿ. ಎಲ್ಲರೂ ಅವರನ್ನು ಗುರುತಿಸಲ್ಪಟ್ಟಿದ್ದು ಲೋಕಯ್ಯಣ್ಣ ಎಂದು ಅವರನ್ನು ಕರೆಯುವಂತದ್ದೇ ಲೋಕಯ್ಯಣ್ಣ ಎಂದು. ಎಲ್ಲರ ಅಣ್ಣನಂತೆ ಅವರು ತಮ್ಮ ವ್ಯಕ್ತಿತ್ವವನ್ನು ಬೆಳೆಸಿಕೊಂಡಿದ್ದರು. ನೇತಾಜಿ ಸುಭಾಷ್‌ಚಂದ್ರಬೋಸ್, ಭಗತ್‌ಸಿಂಗ್, ಚಂದ್ರಶೇಖರ ಆಜಾದ್, ಸುಖದೇವ್ ಇಂಥವರ ಆ ಕ್ರಾಂತಿಕಾರಕ ಹೋರಾಟವನ್ನು ಆಗಾಗ ಬೇರೆ ಬೇರೆ ಸಂದರ್ಭಗಳಲ್ಲಿ ಭಾಷಣಗಳ ಮೂಲಕ ನಮಗೆಲ್ಲರಿಗೂ ಹೇಳುತ್ತಿದ್ದರು. ನಮ್ಮ ಯುವಜನಾಂಗಕ್ಕೂ ಸ್ಫೂರ್ತಿಯನ್ನು ಕೊಡುವಂತಹ ಕಾರ್ಯವನ್ನು ಕೂಡ ಅವರು ಮಾಡುತ್ತಾ ಇದ್ದರು. ಪ್ರಖರವಾದ ರಾಷ್ಟ್ರಭಕ್ತಿ ಜೊತೆಯಲ್ಲಿ ಕಾರ್ಮಿಕ ಕ್ಷೇತ್ರದಲ್ಲಿ ವಿಶೇಷವಾದ ಆಸಕ್ತಿಯನ್ನು ಹೊಂದಿರತಕ್ಕಂತಹ ಲೋಕಯ್ಯಣ್ಣನವರು ಹೆಚ್‌ಎಂ.ಎಸ್.ನ ರಾಜ್ಯಾಧ್ಯಕ್ಷರಾಗಿ ಅವರು ಕಾರ್ಮಿಕ ಕ್ಷೇತ್ರದಲ್ಲಿ ಕೊಟ್ಟಿರುವ ಕೊಡುಗೆಯನ್ನು ಈ ಸಂದರ್ಭದಲ್ಲಿ ನಾನು ಸ್ಮರಿಸುತ್ತಿದ್ದೇನೆ. ಕ್ರೀಡಾ ಕ್ಷೇತ್ರದಲ್ಲೂ ಕೂಡ, ರಾಷ್ಟ್ರ ಮತ್ತು ರಾಜ್ಯ ಮಟ್ಟದಲ್ಲಿ ಕುಸ್ತಿ ಪಂದ್ಯಾಟವನ್ನು, ಬಾಡಿ ಬಿಲ್ಡಿಂಗ್‌ಗೆ ಸಂಬಂಧಪಟ್ಟ ಅನೇಕ ಕಾರ್ಯಕ್ರಮಗಳನ್ನು ನಮ್ಮ ಕ್ಷೇತ್ರದಲ್ಲಿ ಸಂಘಟಿಸಿದಂತಹ ಕೀರ್ತಿ ಅವರದ್ದು. ಅವರನ್ನು ಇನ್ನೊಂದು ಅರ್ಥದಲ್ಲಿ ಗುರ್ತಿಸಲ್ಪಟ್ಟಿದ್ದೇ ಫೈಲ್ವಾನ್ ಲೋಕಯ್ಯಣ್ಣ ಅಂತಲೇ. ಈ ರೀತಿಯಲ್ಲಿ ತನ್ನ ವ್ಯಕ್ತಿತ್ವವನ್ನು ಎಲ್ಲಾ ಹಂತಗಳಲ್ಲಿ ವಿಕಸನಗೊಳಿಸಿ ಯಾವುದೇ ಪಕ್ಷಬೇಧವಿಲ್ಲದೆ ಯಾರು ಪ್ರಾಮಾಣಿಕವಾಗಿ ಕೆಲಸ ಮಾಡುತ್ತಾರೋ ಅವರಿಗೆ ನಿರಂತರವಾಗಿ ಮಾರ್ಗದರ್ಶನ ಮಾಡುವಂತಹ ಚೇತನ ಅವರು. ಅಂತಹ ಸನ್ಮಾನ್ಯ ಶ್ರೀ ಲೋಕಯ್ಯಣ್ಣನವರ ಚೇತನವನ್ನು ನಾನು ಈ ಸಂದರ್ಭದಲ್ಲಿ ವಂದಿಸಿ ಅವರ ಆತ್ಮಕ್ಕೆ ಚಿರಶಾಂತಿಯನ್ನು ಕೋರಲಿಕ್ಕೆ ಇಚ್ಛಿಸುತ್ತೇನೆ. ಇದೇ ರೀತಿಯಲ್ಲಿ ತಾವು ಉಲ್ಲೇಖ ಮಾಡಿದಂತಹ ಶ್ರೀ ಬಿ.ಎಂ. ಮೆಣಸಿನಕಾಯಿ, ಶ್ರೀ ಎಸ್. ಅಂಜಯ್ಯ, ಶ್ರೀ ಜೆ.ಎಂ. ಸೂರ್ಯನಾರಾಯಣ ಗೌಡ, ಶ್ರೀ ಕೆ.ಆರ್. ಶ್ರೀನಿವಾಸನ್, ಶ್ರೀಮತಿ ಕಲ್ಪನಾ ಚಾವ್ಲಾ, ಶ್ರೀಮತಿ ಪಂಡರಿಬಾಯಿ, ಶ್ರೀ ತೆ. ಹನುಮಂತಪ್ಪ ಇವರ ಆತ್ಮಕ್ಕೂ ಚಿರಶಾಂತಿಯನ್ನು ಕೋರಿ ಒಂದು ಮಾತನ್ನು ಹೇಳಲಿಚ್ಛಿಸುತ್ತೇನೆ. ಶ್ರೀಮತಿ ಕಲ್ಪನಾ ಚಾವ್ಲಾ ಅವರು ಬಾಹ್ಯಾಕಾಶದ ನಕ್ಷತ್ರಗಳ ಕನಸನ್ನು ಬಾಲ್ಯದಲ್ಲಿಯೇ ಕಂಡರು. ಆ ಕನಸನ್ನು ಸಾಕಾರಗೊಳಿಸಿದಂತಹ ಒಂದು ಕೀರ್ತಿ, ಯಶಸ್ಸು ಕಲ್ಪನಾ ಚಾವ್ಲಾರವರದು. ಅವರು ಈ ದೇಶದ ಸಂಪತ್ತು, ಅವರ ಸ್ಮರಣಾರ್ಥವಾಗಿ ಯಾವುದೇ ರೀತಿಯಲ್ಲಿ ಯುವ ಜನರಿಗೆ ನಿರಂತರವಾಗಿ

ಪ್ರೇರಣೆ ಮಾಡುವಂತಹದ್ದನ್ನು ರಾಷ್ಟ್ರ ಮಟ್ಟದಲ್ಲಿ ಈಗಾಗಲೇ ಮಾಡಿದ್ದಾರೆ, ರಾಜ್ಯ ಮಟ್ಟದಲ್ಲೂ ಕೂಡ ಈ ರೀತಿ ಪ್ರಶಸ್ತಿಯನ್ನು ಘೋಷಣೆ ಮಾಡುವ ಮೂಲಕ ಅವರ ನೆನಪು ಅವಿಸ್ಮರಣೀಯವಾಗಿರುವಂತಹ ನಿಟ್ಟಿನಲ್ಲಿ ಕೂಡ ನಾವು ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕಾಗಿದೆ ಎನ್ನುವಂತಹ ಮಾತನ್ನು ಹೇಳುತ್ತಾ ಶ್ರೀಮತಿ ಕಲ್ಪನಾ ಚಾವ್ಲಾರವರ ಸ್ಫೂರ್ತಿ ನಮ್ಮ ಯುವ ಜನಾಂಗಕ್ಕೆ ಸದಾ ಇರಲಿ ಎಂದು ಹಾರೈಸುತ್ತಾ ಶ್ರೀಮತಿ ಕಲ್ಪನಾ ಚಾವ್ಲಾರವರ ಆತ್ಮಕ್ಕೆ ಚಿರಶಾಂತಿಯನ್ನು ಕೋರಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಕೆ.ಎಂ. ಕೃಷ್ಣಮೂರ್ತಿ (ಕಡೂರು) :- ಸನ್ಮಾನ್ಯ ಅಧ್ಯಕ್ಷರೇ, ವಿಧಾನ ಸಭೆಯಲ್ಲಿ ಜಾತ್ಯಾತೀತ ಜನತಾ ದಳದ ಶಾಸಕರು ಇದ್ದಾರೆ ಎನ್ನುವುದನ್ನು ದಯಮಾಡಿ ತಾವು ಮನಗಾಣಬೇಕು.

ಅಧ್ಯಕ್ಷರು :- ಆ ಪ್ರಶ್ನೆ ಆಮೇಲೆ, ಈಗಲ್ಲ, ಸಂತಾಪ ಸೂಚಕ ಸಮಯದಲ್ಲಿ ದಯವಿಟ್ಟು ಅವನ್ನೆಲ್ಲಾ ಪ್ರಸ್ತಾಪ ಮಾಡಬೇಡಿ.

ಶ್ರೀ ಕೆ.ಎಂ. ಕೃಷ್ಣಮೂರ್ತಿ :- ಸಂತಾಪ ಸೂಚಕ ಸಭೆಯೆಂದು ನಾವು ಮಾತನಾಡುತ್ತೇವೆಂದು ಕೇಳಿಕೊಳ್ಳುತ್ತಿದ್ದೇವೆ, ನೀವು ಅವಕಾಶವನ್ನೇ ಕೊಡುತ್ತಿಲ್ಲವಲ್ಲಾ.

ಅಧ್ಯಕ್ಷರು :- ತಮಗೂ ಅವಕಾಶ ಕೊಡುತ್ತೇನೆ ತಾವು ಸುಮ್ಮನೆ ಕೈ ಎತ್ತಿದರೆ ಆಗುವುದಿಲ್ಲ. ಬೇರೆಯವರ ಚೀಟಿ ಬರೆದು ಕಳುಹಿಸಿದ್ದಾರೆ, ನೀವು ಚೀಟಿ ಬರೆದು ಕಳುಹಿಸಿಲ್ಲ

ಶ್ರೀ ಕೆ.ಎಂ. ಕೃಷ್ಣಮೂರ್ತಿ :- ಚೀಟಿ ಬರೆದು ಕಳುಹಿಸಬೇಕೆಂದು ಹೇಳಿದರೆ ನಾವೂ ಬರೆದು ಕಳುಹಿಸುತ್ತೇವೆ. ಸಭಾಧ್ಯಕ್ಷರು ಹಿಂದೆಯಲ್ಲಾ ಏನು ಮಾಡುತ್ತಿದ್ದರೆಂದರೆ ಕೈ ಎತ್ತಿದವರಿಗೆ ಮಾತನಾಡಲು ಅವಕಾಶ ಕೊಡುತ್ತಿದ್ದರು, ಇಲ್ಲದಿದ್ದರೆ ತಾವು ಪಕ್ಷದ ವಿಚಾರವನ್ನು ಇಟ್ಟುಕೊಂಡು ಹೆಚ್ಚುವರಿ ಮಾತನಾಡಬೇಕಾದ ಸಂದರ್ಭದಲ್ಲಿ ಚೀಟಿ ಕೊಡಬೇಕು ಎಂದು ಹೇಳುತ್ತಿದ್ದರು.

ಅಧ್ಯಕ್ಷರು :- ಮಾನ್ಯ ಕೆ.ಎಂ. ಕೃಷ್ಣಮೂರ್ತಿಯವರೆ, ಯಾರೇ ಮಾತನಾಡಲಿಕ್ಕೆ ಕೈ ತೋರಿಸಿದರೆ ನಾನು ಕರೆಯುವುದಿಲ್ಲ. ಚೀಟಿ ಬರೆದು ಕಳುಹಿಸಬೇಕು.

ಶ್ರೀ ವಿಜಯಕುಮಾರ್ ಶೆಟ್ಟಿ (ಸುರತ್ಕಲ್) :- ಸನ್ಮಾನ್ಯ ಸಭಾಧ್ಯಕ್ಷರೇ, ತಾವು ನಿರ್ಣಯಿಸಿದಂತಹ ಈ ಸಂತಾಪ ಸೂಚಕ ನಿರ್ಣಯಕ್ಕೆ ಸಂಪೂರ್ಣ ಬೆಂಬಲವನ್ನು ವ್ಯಕ್ತಪಡಿಸುತ್ತಾ, ಸನ್ಮಾನ್ಯ ಬಿ.ಎಂ. ಮೆಣಸಿನಕಾಯಿಯವರು ನನಗೆ ಹೆಚ್ಚು ಪರಿಚಯ ಇಲ್ಲದಿದ್ದರೂ ಕೂಡ ಪತ್ರಿಕೆಯಲ್ಲಿ ನೋಡಿದ ಪ್ರಕಾರ ಅವರು ಬಹಳಷ್ಟು ಪ್ರಾಮಾಣಿಕ ರಾಜಕಾರಣಿಗಳಾಗಿದ್ದುಕೊಂಡು ಉತ್ತಮ ಸೇವೆಯನ್ನು ನಮ್ಮ ಕರ್ನಾಟಕದ ಜನತೆಗೆ ಕೊಟ್ಟಿದ್ದಾರೆ. ನಮ್ಮ ಇನ್ನೋರ್ವ ನೇತಾರರು ಸನ್ಮಾನ್ಯ ಲೋಕಯ್ಯ ಶೆಟ್ಟಿಯವರು. ಅವರ ಬಗ್ಗೆ ಪ್ರಾಮುಖ್ಯವಾಗಿ ಹೇಳುವುದಾದರೆ, ಅಳಿದುಳಿದ ಸ್ವಾತಂತ್ರ್ಯ ಹೋರಾಟಗಾರರಲ್ಲಿ ಸನ್ಮಾನ್ಯ ಶ್ರೀ ಲೋಕಯ್ಯ ಶೆಟ್ಟಿಯವರು ಒಬ್ಬರು ಎಂದು ಹೇಳಿದರೆ ತಪ್ಪಾಗಲಾರದು. ಲೋಕಯ್ಯ ಶೆಟ್ಟಿಯವರು ಯುವಕರನ್ನು ಒಗ್ಗೂಡಿಸಿಕೊಂಡು ಅನೇಕ ಸಮಾಜ ಸೇವಾ ಕಾರ್ಯಕ್ರಮಗಳನ್ನು ಮಾಡಿಕೊಂಡು ಬಂದಿದ್ದಾರೆ. ಹೆಚ್.ಎಂ.ಎಸ್.ನ ರಾಜ್ಯಾಧ್ಯಕ್ಷರಾಗಿದ್ದುಕೊಂಡು ಕಾರ್ಮಿಕರನ್ನು ಒಗ್ಗೂಡಿಸಿ ಕಾರ್ಮಿಕರ ಅನೇಕ ಬೇಡಿಕೆಗಳನ್ನು ಈಡೇರಿಸುವುದರಲ್ಲಿ ಬಹುಶಃ ಅವರಷ್ಟು ಮುಂದೆ ಹೋದಂತಹ ರಾಜಕಾರಣಿ ಯಾರೂ ಇಲ್ಲವೆಂದು ಹೇಳಲಿಕ್ಕೆ ನನಗೆ ಸಂತೋಷವಾಗಿತ್ತಿದೆ. ಅದು ಮಾತ್ರವಲ್ಲದೆ ರಾಷ್ಟ್ರ ಮಟ್ಟದ ಬಾಡಿ ಬಿಲ್ಡರ್ ಆಗಿದ್ದುಕೊಂಡು ಅನೇಕ ಯುವಕರಿಗೆ ಮಾರ್ಗದರ್ಶಕರಾಗಿದ್ದರು. ಆದರೆ ಅವರು ಈಗಾಗಲೇ ಶ್ರೀಮಾನ್ ಸಿಂಧ್ಯ ಅವರು ಹೇಳಿದರ ಪ್ರಕಾರ ಅವರು ಜನತಾದಳದ ಸದಸ್ಯರಾಗಿರಲಿಲ್ಲ.

ಅವರು ಕ್ರಾಂತಿರಂಗದ ಸದಸ್ಯರಾಗಿದ್ದುಕೊಂಡು ನಮ್ಮ ಈ ವಿಧಾನಸಭೆಯಲ್ಲಿ ಸುಮಾರು 1980 ರಿಂದ 1985 ರವರೆಗೆ ಉತ್ತಮ ಸೇವೆಯನ್ನು ಸಲ್ಲಿಸಿಕೊಂಡು ನಮ್ಮ ಜಿಲ್ಲೆಗೆ ವಿಶೇಷವಾದ ಕೀರ್ತಿಯನ್ನು ತಂದಿದ್ದಾರೆ. ಇಂಥ ಅನೇಕ ಮಂದಿಯ ಈ ಒಂದು ಸಂತಾಪ ಸೂಚನಾ ನಿರ್ಣಯಕ್ಕೆ ನನ್ನ ಸಂಪೂರ್ಣ ಬೆಂಬಲವನ್ನು ವ್ಯಕ್ತಪಡಿಸುತ್ತಾ ಈ ಮೃತ ಹೊಂದಿದವರ ಕುಟುಂಬಕ್ಕೆ ಅದನ್ನೆಲ್ಲಾ ಸೈರಿಸುವಂತಹ ಶಕ್ತಿಯನ್ನು ಪರಿಮಾತ್ಮನು ಕೊಡಲಿ ಎಂದು ದೇವರಲ್ಲಿ ನಾನು ಪ್ರಾರ್ಥಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಕೆ.ಎಂ. ಕೃಷ್ಣಮೂರ್ತಿ (ಕಡೂರು) :- ಸನ್ಮಾನ್ಯ ಸಭಾಧ್ಯಕ್ಷರೆ, ತಾವು ಮಂಡಿಸಿದಂತಹ ಸಂತಾಪ ಸೂಚಕ ನಿರ್ಣಯವನ್ನು ಬೆಂಬಲಿಸಿ, ವಿಧಾನ ಪರಿಷತ್ತಿನ ಸದಸ್ಯರು ಮತ್ತು ಲೋಕಸಭಾ ಸದಸ್ಯರಾಗಿದ್ದಂತಹ ಶ್ರೀ ಬಿ.ಎಂ. ಮೆಣಸಿನಕಾಯಿಯವರು ಏನಿದ್ದರು, ಅವರ ಜೊತೆಗೆ ಈ ರಾಜ್ಯ ಪಟ್ಟಣಗಳ ಒಂದು ಫೆಡರೇಷನ್ ಸಂದರ್ಭದಲ್ಲಿ ನಾನೂ ಕೂಡ ಫೆಡರೇಷನ್‌ನ ಸದಸ್ಯನಾಗಿ ಮೈಸೂರು, ಹುಬ್ಬಳ್ಳಿಯಲ್ಲಿ ಕರೆದಂತಹ ಸಭೆಯಲ್ಲಿ ಭಾಗವಹಿಸಿ ಅವರು ತೆಗೆದುಕೊಂಡಂತಹ ನಿಲುವನ್ನು ನೋಡಿದಾಗ ನಮಗೆ ಹೆಮ್ಮೆ ಅನ್ನಿಸಿತ್ತು, 1980ರಲ್ಲಿ ನಾವು ಅವರಿಗೆ ಹೇಳಿದೆವು ನಿಮಗೆ ಒಂದು ಸಾರಿ ವಿಧಾನಸಭೆಯಲ್ಲಿ, ವಿಧಾನಪರಿಷತ್ತಿನಲ್ಲಿ ಅವಕಾಶ ಸಿಗಬಹುದು, ಹಾಗೆಯೇ ಜನಪ್ರತಿನಿಧಿಯಾಗಿ ಲೋಕಸಭೆಯಲ್ಲಿ ನೀವು ಭಾಗವಹಿಸುವಷ್ಟು ಬುದ್ಧಿವಂತರಿದ್ದೀರಿ, ಆಡಳಿತದ ವಿಚಾರದಲ್ಲಿ ತಾವು ಬಹಳ ದೃಢವಾದ ನಿಲುವನ್ನು ತೆಗೆದುಕೊಳ್ಳುತ್ತಿದ್ದೀರಿ. ಏಕೆಂದರೆ 25 ವರ್ಷಗಳ ಹಿಂದೆ ಏನು ಸ್ಥಳೀಯ ಸಂಸ್ಥೆಗಳು, ಟೌನ್ ಮುನಿಸಿಪಾಲಿಟಿಗಳು, ಸಿಟಿ ಮುನಿಸಿಪಾಲಿಟಿಗಳು, ಕಾರ್ಪೊರೇಷನ್‌ಗಳು ತಮ್ಮ ಅಧಿಕಾರವನ್ನು ಯಾವ ರೀತಿ ಚಲಾಯಿಸಬೇಕು, ಸ್ಥಳೀಯ ಸಂಸ್ಥೆಗಳು ತಮ್ಮ ಆರ್ಥಿಕ ಸಂಪನ್ಮೂಲಗಳನ್ನು ಹೇಗೆ ರೂಢಿಸಿಕೊಳ್ಳಬೇಕು ಎನ್ನುವುದನ್ನು ಅವರು ಆ ಫೆಡರೇಷನ್ನಿನ ಅಧ್ಯಕ್ಷರಾಗಿ ಆ ಸಮಿತಿಯ ಎಲ್ಲಾ ಸದಸ್ಯರಿಗೆ ಬಹಳ ವಿಚಾರಪೂರಿತವಾಗಿ ವಿಚಾರವನ್ನು ಮನದಟ್ಟು ಮಾಡುತ್ತಿದ್ದರು. ಮನುಷ್ಯನ ಹುಟ್ಟು ಆಕಸ್ಮಿಕ, ಸಾವು ನಿಶ್ಚಿಯ, ಹುಟ್ಟು ಸಾವುಗಳ ಮಧ್ಯೆ ಸಮಾಜ ಸೇವೆಯನ್ನು ಮಾಡಬೇಕಾಗುತ್ತದೆ. ಸಮಾಜ ಸೇವೆಯನ್ನು ಮಾಡುವಂತಹ ಸಂದರ್ಭದಲ್ಲಿ ಒಂದು ವ್ಯವಸ್ಥಿತವಾದಂತಹ ತರಬೇತಿಯನ್ನು ಅವರು ತೆಗೆದುಕೊಳ್ಳಬೇಕಾಗಿರುತ್ತದೆ. ಇಲ್ಲದಿದ್ದರೆ ವ್ಯವಸ್ಥಿತವಾಗಿ ಅಧ್ಯಯನ ಮಾಡಬೇಕಾಗಿರುತ್ತದೆ. ಶ್ರೀ ಮೆಣಸಿನಕಾಯಿ ಅವರು ಬಹಳ ಪುಸ್ತಕಗಳನ್ನು ಅಧ್ಯಯನ ಮಾಡಿ ಆ ಮುನಿಸಿಪಲ್ ಕೋಡನ್ನು ಬರಿಯ ಬಾಯಿಯಲ್ಲಿ ಹೇಳುತ್ತಿದ್ದರು. ಆಗ ನಮಗೆ ಅನ್ನಿಸುತಿತ್ತು ಅವರ ತಲೆಯಲ್ಲಿ ಏನಾದರೂ ಕಂಪ್ಯೂಟರ್ ಇಟ್ಟುಕೊಂಡಿದ್ದಾರೋ ಏನೋ ಎಂದು, ಆದರೆ ಆಗ ಕಂಪ್ಯೂಟರ್ ಇರಲಿಲ್ಲ. ಅಂಥ ಒಬ್ಬ ವ್ಯಕ್ತಿಯನ್ನು ನಾವು ಇವತ್ತು ಕಳೆದುಕೊಂಡಿದ್ದೇವೆ.

12.00 ಪಿ.ಎಂ.

ಹಾಗೆಯೇ ಲೋಕಯ್ಯ ಶೆಟ್ಟಿ, ಅಂಜಯ್ಯ, ಸೂರ್ಯನಾರಾಯಣ ಗೌಡರು ಪ್ರಜಾಪ್ರತಿನಿಧಿಸಭೆಯ ಎನ್. ಶ್ರೀನಿವಾಸನ್ ಏನು ಇದ್ದರು, ಅವರೂ ಕೂಡ ನಮ್ಮ ತಂದೆಯವರ ಜೊತೆಯಲ್ಲಿ ಸದಸ್ಯರಾಗಿ ನಮ್ಮ ಕುಟುಂಬ ವರ್ಗದವರಿಗೆ ಬಹಳ ಪರಿಚಯಸ್ಥರಾಗಿದ್ದರು. ಹಾಗೆಯೇ ಶ್ರೀಮತಿ ಕಲ್ಪನಾ ಚಾವ್ಲಾ ಅವರು ಇವತ್ತು ವಿಜ್ಞಾನ ಲೋಕದಲ್ಲಿ, ಬಾಹ್ಯಾಕಾಶ ಪ್ರಪಂಚದಲ್ಲಿ ಅದ್ವಿತೀಯ ಹೆಸರನ್ನು ಮಾಡಿ ಚಂದ್ರಲೋಕಕ್ಕೆ ಹೋಗಿ ವಾಪಸ್ಸಾಗುವಂಥ ಸಂದರ್ಭದಲ್ಲಿ ತನ್ನ ಮನೆಯವರಿಗೆ,

ಕುಟುಂಬವರ್ಗದವರಿಗೆ ಸಂದೇಶವನ್ನು ಕಳುಹಿಸಿ ಇನ್ನೇನು ಅರ್ಧಗಂಟೆಯಲ್ಲಿ ಈ ಭೂಲೋಕದ ಕಕ್ಷೆಗೆ ಬರಬೇಕಾದ ಸಂದರ್ಭದಲ್ಲಿ ಅವರು ಸಾವಿಗೀಡಾದರು. ಅಂತಹ ಒಬ್ಬ ವಿಜ್ಞಾನಿಯನ್ನು ಈ ದೇಶ ಕಳೆದುಕೊಂಡಿದೆ. ಹಾಗೆಯೇ ಶ್ರೀಮತಿ ಪಂಡರಿಬಾಯಿಯವರು. ಕರ್ನಾಟಕದಲ್ಲಿ ಐದು ಕೋಟಿ ಜನ ಏನಿದ್ದಾರೆ ಅವರಲ್ಲಿ ಚಲನಚಿತ್ರ ಲೋಕಕ್ಕೆ ಸಂಬಂಧಪಟ್ಟಂತೆ ಶ್ರೀಮತಿ ಪಂಡರಿಬಾಯಿಯವರ ಹೆಸರನ್ನು ಕೇಳದೇ ಇರುವವರು ಯಾರೂ ಇಲ್ಲ. ಅವರ ಅಭಿನಯ ಹೇಗಿರುತ್ತಿತ್ತು ಎಂದರೆ, ತಮ್ಮದೇ ಆದಂಥ ಅಭಿನಯದಿಂದ ಅದಕ್ಕೇ ಜೀವಕಳೆಯನ್ನು ತುಂಬುತ್ತಿದ್ದರು. ಈ ರಾಜ್ಯದ ಕನ್ನಡಿಗರ, ಅದರಲ್ಲೂ ಮಹಿಳೆಯರ ಹೃದಯಗಳನ್ನು ಅವರು ಗೆದ್ದಿದ್ದರು. ಕೊನೆಗೆ ಅವರ ಸಾವು ಹೇಗೆ ಆಯಿತು ಎಂದರೆ ಯಾವುದೋ ಒಂದು ಅಪಘಾತದಿಂದ ಒಳಗಾಗಿ ಬಹಳ ದುಸ್ಥರ ಸ್ಥಿತಿಯಲ್ಲಿ ಅವರು ತಮ್ಮ ಜೀವನವನ್ನು ನಿಭಾಯಿಸಬೇಕಾಯಿತು. ತಮಿಳುನಾಡಿನ ಇವತ್ತಿನ ಹೆಸರಾಂತ ನಟ ರಜನಿಕಾಂತ್ ಏನಿದ್ದಾರೆ ಅವರನ್ನು ತಮ್ಮ ತಾಯಿ ಎನ್ನುವ ದೃಷ್ಟಿಯಿಂದ ನೋಡಿ ಅವರಿಗೆ ಸೇವೆಯನ್ನು ಮಾಡುವಂಥ ಒಂದು ಅವಕಾಶವನ್ನು ಕಲ್ಪಿಸಿಕೊಂಡರು. ತಮಿಳುನಾಡು ಸರ್ಕಾರ ಕೂಡ ಅವರಿಗೆ 'ಕಲೈಮಣಿ' ಎಂದು ಹೇಳಿ ಬಿರುದನ್ನು ಕೊಟ್ಟಿತ್ತು. ಹಾಗೆಯೇ ಹಿಂದಿ, ತೆಲುಗು ಮತ್ತು ಕನ್ನಡ ಚಲನಚಿತ್ರರಂಗದ ಖ್ಯಾತ ಅಭಿನೇತ್ರಿ ಅವರಾಗಿದ್ದರು. ಇಷ್ಟು ಹೇಳಿ ಇವತ್ತು ತಾವೇನು ಸಂತಾಪ ಸೂಚನೆಯನ್ನು ಮಂಡಿಸಿದ್ದೀರಿ,ಅದನ್ನು ನಾನು ಬೆಂಬಲಿಸಿ ಅವರೆಲ್ಲರ ಆತ್ಮಗಳಿಗೆ ದೇವರು ಚಿರಶಾಂತಿಯನ್ನು ನೀಡಲೆಂದು ಸಭೆಯಲ್ಲಿ ಬೇಡಿಕೊಂಡು ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು :- ಮಾನ್ಯ ಸದಸ್ಯರುಗಳು ಈಗ ಒಂದು ನಿಮಿಷ ಎದ್ದು ನಿಂತು ಗೌರವ ಸೂಚಿಸಬೇಕೆಂದು ಹೇಳುತ್ತೇನೆ.

(ಮೃತರ ಗೌರವಾರ್ಥ ಸದನದ ಎಲ್ಲಾ ಸದಸ್ಯರು ಎದ್ದುನಿಂತು ಒಂದು ನಿಮಿಷ ಮೌನವನ್ನಾಚರಿಸಿದರು)

ಅಧ್ಯಕ್ಷರು :- ಈ ಸದನವು ಅಂಗೀಕರಿಸಿದ ಸಂತಾಪ ಸೂಚಕ ನಿರ್ಣಯವನ್ನು ಮೃತರ ಕುಟುಂಬ ವರ್ಗದವರಿಗೆ ಕಳುಹಿಸಿಕೊಡಲಾಗುವುದು.

2. ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯ

ವಿಷಯ:- ಬರಗಾಲದ ಪರಿಸ್ಥಿತಿ ಬಗ್ಗೆ ಚರ್ಚೆಗೆ ಅವಕಾಶ ನೀಡಲು ಕೋರಿಕೆ

ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು) :- ಸನ್ಮಾನ್ಯ ಅಧ್ಯಕ್ಷರೇ, ಈಗ ಇಡೀ ರಾಜ್ಯದಲ್ಲಿ ಬರಗಾಲ ಬಹಳಷ್ಟು ಬಿಗಡಾಯಿಸುತ್ತಿದೆ ರೈತರು ಬಹಳಷ್ಟು ತೊಂದರೆಯನ್ನು ಅನುಭವಿಸುತ್ತಿದ್ದಾರೆ ಮತ್ತು ಕುಡಿಯುವ ನೀರಿನ ಸಮಸ್ಯೆ ಉಂಟಾಗಿದೆ. ಇದರ ಬಗ್ಗೆ ನಾನು ನಿಲುವಳಿ ಸೂಚನೆಯನ್ನು ಕೊಟ್ಟಿದ್ದೇನೆ. ಅದಕ್ಕಾಗಿ ನಿಲುವಳಿ ಸೂಚನೆಯನ್ನು ಮೊಟ್ಟಮೊದಲು ತೆಗೆದುಕೊಳ್ಳಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಏಕೆಂದರೆ ಬಹಳ ಗಂಭೀರವಾದ ಪರಿಸ್ಥಿತಿಯನ್ನು ನಮ್ಮ ರಾಜ್ಯ ಇವತ್ತು ಎದುರಿಸುತ್ತಿದೆ. ವಿದ್ಯುತ್ತಿನ ಅಭಾವದಿಂದಾಗಿ ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ಹೀಗಾಗಿ....

ಅಧ್ಯಕ್ಷರು :- ಒಂದು ನಿಮಿಷ ತಡೆಯಿರಿ. ಫಾರ್ಮಲ್ ಸಬ್ಜೆಕ್ಟ್ ಇದೆ. ಆಮೇಲೆ ನೀವು ಪ್ರಸ್ತಾಪ ಮಾಡಿ. ಈಗ ಒಂದು ಪ್ರಕಟಣೆ ಇದೆ.